RNI.KAR/KAN/2009/31934 ಬೆಂಗಳೂರು ಸಂಪುಟ: 16 ಸಂಚಿಕೆ: 65 ಪುಟ: 06 ಶನಿವಾರ 01-02-2025

Mail:mussanje2010@gmail.com www.mussanjenews.com

# ಮುಸ್ಸಂಜೆ

ಪ್ರಭಾವಶಾಲಿ ಕನ್ನಡ ಸಂಜೆ ದಿನ ಪತ್ರಿಕೆ

Managing Editor: N.Veerendra Babu (MBA, LLB)
Executive Editor: L P Babu
Honourary Editor: Venkatesh



ಸೆನ್ಸೇಷನಲ್ ನಿರ್ದೇಶಕರ ಜೊತೆ ಸಿನಿಮಾ

ಮಹೇಶ್‌ಬಾಬು ಇನ್ ಡೇಂಜರಸ್ ಪ್ಲೇಸ್!

ನಾನಿ ವಿರುದ್ಧ ಪುಷ್ಕರ್ ಕಿಡಿ

↘ ಪುಟ 6

# 50 ಲಕ್ಷ ಕೋಟಿ ಬಜೆಟ್




**ನವದೆಹಲಿ:** ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ 50 ಲಕ್ಷ ಕೋ. ರೂಗಳ 8ನೇ ಬಜೆಟ್ ಬಜೆಟ್‌ನಲ್ಲಿ ಬಡತನ ನಿರ್ಮೂಲನೆ, ಮಧ್ಯಮವರ್ಗ, ಮೂಲಭೂತ ಸೌಕರ್ಯ, ಗ್ರಾಮೀಣಾಭಿವೃದ್ಧಿ, ಹಾಗೂ ಮೀನುಗಾರಿಕೆಗೆ ವಿಶೇಷ ಒತ್ತು ನೀಡಲಾಗಿದೆ. ಸತತ ಏಳು ಬಾರಿ ಬಜೆಟ್ ಮಂಡಿಸುವ ಮೂಲಕ ಇತಿಹಾಸ ಸೃಷ್ಟಿಸಿರುವ ಅವರು ಇಲ್ಲಿಯವರೆಗೆ ಆರು ಪೂರ್ಣಾವಧಿ ಮತ್ತು ಎರಡು ಮಧ್ಯಂತರ ಬಜೆಟ್‌ಗಳನ್ನು ಮಂಡಿಸಿದ್ದಾರೆ. ಸೀತಾರಾಮನ್ ಅವರಿಗಿಂತ ಮೊದಲು, ಗರಿಷ್ಠ ಬಾರಿ ಬಜೆಟ್ ಮಂಡಿಸಿದವರಲ್ಲಿ ಮಾಜಿ ಪ್ರಧಾನಿ ಮೊರಾರ್ಜಿ ದೇಸಾಯಿ, ಮಾಜಿ ಹಣಕಾಸು ಸಚಿವ ಪಿ. ಚಿದಂಬರಂ ಮತ್ತು ಪ್ರಣಬ್ ಮುಖರ್ಜಿ ಸೇರಿದ್ದಾರೆ.

ನಿರ್ಮಲಾ ಸೀತಾರಾಮನ್ ಅವರು ಸಬ್ ಕಾ ಸಾತ್ ಸಬ್ ಕಾ ವಿಕಾಸ್ ಘೋಷದೊಂದಿಗೆ ಮಂಡಿಸಿರುವ ಅಯವ್ಯಯ 100 ಕಡಿಮೆ ಕಡಿಮೆ ಇಳುವರಿ ಇರುವ ಜಿಲ್ಲೆಗಳಿಗೆ ಹೊಸ ಯೋಜನೆ ಘೋಷಣೆ. ಪ್ರಧಾನಿ ಧನ್ ಧಾನ್ಯ ಕೃಷಿ ಯೋಜನೆ ಘೋಷಣೆ ಮಾಡಿದೆ. ಗ್ರಾಮೀಣ ಭಾಗದಲ್ಲಿ ರೈತರಿಗೆ ಆರ್ಥಿಕ ನೆರವು 6 ವರ್ಷ ಆತ್ಮ ನಿರ್ಭರತಾ ಪಲ್ಸ್ ಯೋಜನೆ, ಬಿಹಾರದಲ್ಲಿ ಮಕಾನ ಬೋರ್ಡ್, ಕಿಸಾನ್ ಕ್ರೆಡಿಟ್ ಸಾಲದ ಮಿತಿ 5 ಲಕ್ಷಕ್ಕೆ ಹೆಚ್ಚಳ ಘೋಷಣೆ ಮಾಡಲಾಗಿದೆ. ಮುಂದಿನ ಐದು ವರ್ಷ ಸುಖ ಭಾರತಕ್ಕಾಗಿ ಬಜೆಟ್ ಮಂಡನೆ ಮಾಡಲಾಗುತ್ತಿದ್ದು ದೇಶ ಕೇವಲ ಮಣ್ಣಿಗೆ ಮಾತ್ರವಲ್ಲ ಜನರಿಗಾಗಿ ದೇಶ, ಭಾರತದ ಅರ್ಥವ್ಯವಸ್ಥೆ ವೇಗದ ಗತಿಯಲ್ಲಿ ಬೆಳೆಯುತ್ತಿದೆ, ಯುವಕರು ರೈತರು ಮಧ್ಯಮ ವರ್ಗಕ್ಕೆ ಮೊದಲ ಆದ್ಯತೆ ನೀಡಲಾಗುತ್ತಿದೆ, ವಿಕಸಿತ ಭಾರತವೇ ನಮ್ಮ ಸರ್ಕಾರದ ಮೊದಲ ಗುರಿಯಾಗಿದೆ ಎಂದು ಸಚಿವೆ ಹೇಳಿದ್ದಾರೆ. ಅಲ್ಲದೆ ರೈತರಿಗಾಗಿ ಮೂರು ಯೂರಿಯಾ ಪ್ಲಾಂಟ್ ನಿರ್ಮಾಣ ಮಾಡಲಾಗುತ್ತದೆ, ರಾಷ್ಟ್ರೀಯ ಕೃಷಿ ಮಾರುಕಟ್ಟೆ ಸಂಸ್ಥೆಗಳಾದ ಎನ್‌ಎಎಫ್, ಇಇಎನ್, ಸಿಸಿಎಫ್ ಇತ್ಯಾದಿ ಸಂಸ್ಥೆಗಳೊಂದಿಗೆ ರೈತರು ಒಪ್ಪಂದ ಮಾಡಿಕೊಂಡುಬೇಳೆಕಾಳುಗಳನ್ನು ಮಾರಬಹುದು,

ಇದರಿಂದ ರೈತರಿಗೆ ಸುಲಭ ಮಾರುಕಟ್ಟೆ ಸಿಕ್ಕಂತಾಗುತ್ತದೆ, 2047ಕ್ಕೆ ಬಡತನ ಮುಕ್ತ ಭಾರತ ಕಟ್ಟುವ ಸಂಕಲ್ಪವಾಗಿದೆ, ಹೀಗಾಗಿ ಯುವಕರು ಬಡವ ಮಹಿಳೆ ರೈತರಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ, ವಿಕಾಸಿತ್ ಭಾರತ ಗುರಿಯತ್ತ ಭಾರತ ಮುಂದುವರೆದಿದೆ, ಭಾರತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ ದೇಶವಾಗಿದೆ, ಸಣ್ಣ ಮತ್ತು ಅತಿ ಸಣ್ಣ ವಲಯಗಳನ್ನು ಕೇಂದ್ರೀಕರಿಸಿದೆ, ರಫ್ತು ಪ್ರೋತ್ಸಾಹ ಹೂಡಿಕೆ ಮೇಲೆ ಗಮನ ಹರಿಸಿದೆ ಎಂದಿದ್ದಾರೆ. ಮಹಿಳೆಯರಿಗೆ ಭರ್ಜರಿ ಗುಡ್ ನ್ಯೂಸ್ ನೀಡಿದ್ದು, 5 ವರ್ಷಗಳ ಸಾಲ ನೀಡುವ ಹೊಸ ಯೋಜನೆಯನ್ನು ನಿರ್ಮಲಾ ಸೀತಾರಾಮನ್ ಘೋಷಣೆ ಮಾಡಿದ್ದಾರೆ.

ಸರ್ಕಾರ 120 ಹೊಸ ವಿಮಾನ ನಿಲ್ದಾಣಗಳನ್ನು ನಿರ್ಮಾಣ ಮಾಡಲಿದೆ. ಈ ವಿಮಾನ ನಿಲ್ದಾಣಗಳು ಮುಂದಿನ 10 ವರ್ಷಗಳಲ್ಲಿ 4 ಕೋಟಿ ಹೆಚ್ಚುವರಿ ಪ್ರಯಾಣಿಕರನ್ನು ನಿರ್ವಹಣೆ ಮಾಡಲಿವೆ ಎಂದು ಹೇಳಿದರು.ಈಗಾಗಲೇ ಕೇಂದ್ರ ಸರ್ಕಾರ ಉಡಾನ್ ಯೋಜನೆಯನ್ನು ಘೋಷಣೆ ಮಾಡಿದೆ, ಹೊಸ ಉಡಾನ್ ಯೋಜನೆಯನ್ನು ಸಹ ಜಾರಿಗೆ ತರಲಾಗುತ್ತದೆ,

ಈ ಮೂಲಕ ಎರಡು ಮತ್ತು 3ನೇ ಹಂತದ ನಗರಗಳಿಗೆ ಸಹ ವಿಮಾನ ಸೇವೆ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಘೋಷಣೆ ಮಾಡಿದರು. ಕೇಂದ್ರ ಸರ್ಕಾರ ಜನ ಸಾಮಾನ್ಯರು ಸಹ ವಿಮಾನದಲ್ಲಿ ಹಾರಾಡಲು ಅನುಕೂಲವಾಗಬೇಕು ಎಂದು ಅಕ್ಟೋಬರ್ 21, 2016ರಂದು ಉಡಾನ್ ಯೋಜನೆಯನ್ನು ಘೋಷಣೆ ಮಾಡಿತು, 'ಉಡೇ ದೇಶ್ ಕಾ ಆಮ್ ನಾಗರೀಕ್' ಎನ್ನುವ ಘೋಷಣೆಯೊಂದಿಗೆ ಈ ಯೋಜನೆ ಆರಂಭಿಸಲಾಯಿತು. ನಾಗರಿಕ ವಿಮಾನಯಾನ ಸಚಿವಾಲಯ ದೇಶಾದ್ಯಂತ ವಿಮಾನಗಳ ಮೂಲಕ ಪ್ರಾದೇಶಿಕ ವಾಯು

ಯೋಜನೆ ವಿಶೇಷವಾಗಿ ದೂರದ ಪ್ರದೇಶಗಳಲ್ಲಿ ಮೂಲಸೌಕರ್ಯ ಮತ್ತು ಸಂಪರ್ಕವನ್ನು ಸುಧಾರಿಸಲು ಸಹಾಯಕವಾಗಿದೆ, ಉಡಾನ್ ಯೋಜನೆ ಮಾರುಕಟ್ಟೆ, ವಿಮಾನಯಾನ ಸಂಸ್ಥೆಗಳ ಬೇಡಿಕೆಯಂತೆ ನಿರ್ದಿಷ್ಟ ಮಾರ್ಗಗಳಲ್ಲಿ ವಿಮಾನ ಹಾರಾಟವಾಗಬೇಕು ಎಂಬ ಬೇಡಿಕೆಯನ್ನು ತೀರ್ಮಾನಿಸುತ್ತದೆ, ಯೋಜನೆಯು ವಿಮಾನ ನಿಲ್ದಾಣ ನಿರ್ವಾಹಕರು, ರಾಜ್ಯ ಸರ್ಕಾರಗಳು ಒದಗಿಸುವ ವಿವಿಧ ರಿಯಾಯಿತಿಗಳ ಮೂಲಕ ವಿಮಾನ ಸೇವೆಗೆ ಬೆಂಬಲವನ್ನು ನೀಡುತ್ತದೆ ಎಂದು ಸಚಿವೆ ಹೇಳಿದರು

## ಯಾವುದೆಲ್ಲಾ ದುಬಾರಿ

1. ಫ್ಲ್ಯಾಟ್ ಪ್ಯಾನೆಲ್ ಡಿಸ್ ಪ್ಲೇ
2. ಕೈಯಲ್ಲಿ ಹೆಣೆದ ಬಟ್ಟೆಗಳು
3. ತಂತ್ರಜ್ಞಾನ ಕ್ಷೇತ್ರದ ಸರಕುಗಳು
4. ಮೊಬೈಲ್ ರೀಚಾರ್ಜ್ ಮತ್ತು ಇಂಟರ್ನೆಟ್ ಸೇವೆಗಳು
5. ವಿಮಾನ ಟಿಕೆಟ್‌ದರ
6. ಹೈಟೆಕ್‌ಎಲೆಕ್ಟ್ರಾನಿಕ್ಸ್
7. ಆಮದು ಕಾರುಗಳು
8. ತಂಬಾಕು ಮತ್ತು ಸಿಗರೇಟ್

## ಯಾವುದು ಅಗ್ಗ

1. ಕೋಬಾಲ್ಟ್ ಉತ್ಪನ್ನಗಳು
2. ಎಲ್‌ಇಡಿ ಟಿವಿ
3. ಎಲೆಕ್ಟ್ರಿಕ್ ವಾಹನಗಳು
4. ಕರಕುಶಲ ವಸ್ತುಗಳು.
5. ಸ್ವದೇಶಿ ಬಟ್ಟೆಗಳು
6. ಚರ್ಮದ ಶೂ, ಬೆಲ್ಟ್
7. ಫ್ರೋಜನ್ ಫಿಶ್
8. ಮೊಬೈಲ್,
9. ಚರ್ಮದ ಉತ್ಪನ್ನಗಳು

## ತೆರಿಗೆದಾರರಿಗೆ ಗಿಫ್ಟ್!





**ನವದೆಹಲಿ:** ಈ ಬಾರಿಯು ಕೇಂದ್ರ ಬಜೆಟ್‌ನಲ್ಲಿ ಆದಾಯ ತೆರಿಗೆದಾರರಿಗೆ ಬಂಪರ್ ಗಿಫ್ಟ್ ನೀಡಲಾಗಿದ್ದು, 12 ಲಕ್ಷ ರೂಪಾಯಿವರೆಗೂ ತೆರಿಗೆ ವಿನಾಯಿತಿ ನೀಡಲಾಗಿದೆ. ಹನ್ನೆರಡು ಲಕ್ಷದವರೆಗೆ ವಾರ್ಷಿಕ ಆದಾಯ ಇರುವವರು ತೆರಿಗೆ ಕಟ್ಟುವಂತಿಲ್ಲ ಎಂದು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಕೇಂದ್ರ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ. ಇದು ಮಧ್ಯಮ ವರ್ಗದವರಿಗೆ ಹೆಚ್ಚು ಅನುಕೂಲವಾಗಲಿದೆ ಎಂದು ಹೇಳಲಾಗುತ್ತಿದೆ.ಆದಾಯ ತೆರಿಗೆ ವಿನಾಯಿತಿ ಮಿತಿಯನ್ನು ಏರಿಕೆ ಮಾಡಿ, 12 ಲಕ್ಷ ರೂಪಾಯಿವರೆಗೂ ಆದಾಯ ತೆರಿಗೆ ಮುಕ್ತಿ ನೀಡಲಾಗಿದೆ. 4 ಲಕ್ಷದಿಂದ 8 ಲಕ್ಷದವರೆಗೆ ಶೇಕಡ 5ರಷ್ಟು ತೆರಿಗೆ, 8 ಲಕ್ಷದಿಂದ 11 ಲಕ್ಷದವರೆಗೆ ಶೇಕಡ 10ರಷ್ಟು ತೆರಿಗೆ, 12 ಲಕ್ಷದಿಂದ 15 ಲಕ್ಷದವರೆಗೆ ಶೇಕಡ 15ರಷ್ಟು ತೆರಿಗೆ, 15 ಲಕ್ಷದಿಂದ 20 ಲಕ್ಷದವರೆಗೆ ಶೇಕಡ 20ರಷ್ಟು ತೆರಿಗೆ, 20 ಲಕ್ಷದಿಂದ 24 ಲಕ್ಷದರೆಗೆ ಶೇಕಡ 25ರಷ್ಟು ತೆರಿಗೆ, 24 ಲಕ್ಷ ಮೇಲ್ಪಟ್ಟ ಆದಾಯಕ್ಕೆ ಶೇಕಡ 30ರಷ್ಟು ತೆರಿಗೆ ವಿಧಿಸಲಾಗುತ್ತಿತ್ತು.ಹೊಸ ತೆರಿಗೆ ನೀತಿ ಪ್ರಕಾರ ಒಟ್ಟು ಆದಾಯ ತೆರಿಗೆ ದರ4,00,000ರ ವರೆಗೆ ತೆರಿಗೆ ಇಲ್ಲ, 4,00,001 ರಿಂದ 8,00,000 ಶೇ 5, 8,00,001 ರಿಂದ 12,00,000 ಶೇ 10, 12,00,001 ರಿಂದ 16,00,000 ಶೇ 15, 16,00,001 ರಿಂದ 20,00,000 ಶೇ 20, 20,00,001 ರಿಂದ 24,00,000 ಶೇ 25,24,00,000 ಶೇ 30 ಕ್ಕಿಂತ ಅಧಿಕ ತೆರಿಗೆ ವಿಧಿಸಲಾಗುತ್ತದೆ.

## ಬಿಹಾರ್, ಆಂಧ್ರಕ್ಕೆ ಬಂಪರ್!

**ನವದೆಹಲಿ:** ಈ ಬಾರಿಯೂ ಬಜೆಟ್‌ನಲ್ಲಿ ಎನ್‌ಡಿಎ ಮಿತ್ರ ಪಕ್ಷಗಳ ರಾಜ್ಯಗಳಿಗೆ ಬಂಪರ್ ಸಿಕ್ಕಿದೆ. ಕಳೆದ ಎರಡು ಅವಧಿಯಿಂದಲೂ ಸ್ವತಂತ್ರವಾಗಿ ಆಡಳಿತ ನಡೆಸಿದ್ದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಈ ಬಾರಿ ಸಮ್ಮಿಶ್ರ ಸರ್ಕಾರವನ್ನು ನಡೆಸುತ್ತಿದೆ. ಸಮ್ಮಿಶ್ರ ಸರ್ಕಾರದ ಭಾಗವಾಗಿ ಬಿಹಾರದ ಜನತಾ ದಳ ಸಂಯುಕ್ತ (ಜೆಡಿಯು) ಪಕ್ಷ ಹಾಗೂ ಆಂಧ್ರ ಪ್ರದೇಶದ ತೆಲುಗು ದೇಶಂ ಪಕ್ಷ (ಟಿಡಿಪಿ)ಗಳಿಗೆ ಕಳೆದ ಬಾರಿಯ ಬಜೆಟ್‌ನಲ್ಲೂ ಭರ್ಜರಿ ಬಂಪರ್ ಸಿಕ್ಕಿತ್ತು. ಈ ಬಾರಿಯೂ ಅದರ ಪುನರಾವರ್ತನೆಯಾಗಿದೆ.

ಕೇಂದ್ರ ಬಿಜೆಪಿ ಸರ್ಕಾರದ ಆಧಾರಸ್ತಂಭಗಳಾಗಿ ಈ ಪಕ್ಷಗಳು ಇವೆ. ಈ ಬಾರಿ ನಿರೀಕ್ಷೆಯಂತೆಯೇ ಈ ಎರಡೂ ರಾಜ್ಯಗಳಿಗೆ ಭರ್ಜರಿ ಗಿಫ್ಟ್‌ಗಳನ್ನೇ ಕೊಡಲಾಗಿದೆ. ಬಿಹಾರ ರಾಜ್ಯಕ್ಕೆ ಬಂಪರ್ ಕೊಡುಗೆ ನೀಡಲಾಗಿದೆ. ಐಐಟಿ ಪಾಟ್ನಾ ಸೇರಿದಂತೆ ಒಟ್ಟು 5 ಐಐಟಿ ಅಭಿವೃದ್ಧಿಗಳ ಅನುದಾನ ಮೀಸಲಿರಿಸಲಾಗಿದೆ. ಗ್ರೀನ್ ಫೀಲ್ಡ್ ವಿಮಾನ ನಿಲ್ದಾಣ ಮಂಜೂರು ಮಾಡಲಾಗಿದೆ. ಬಿಹಾರದ 500 ಹೆಕ್ಟೇರ್ ಜಮೀನಿಗೆ ನೀರಾವರಿ ಯೋಜನೆಯನ್ನು ಅಭಿವೃದ್ಧಿ ಮಾಡುವುದಾಗಿ ಹೇಳಲಾಗಿದೆ. ಬಿಹಾರದಲ್ಲಿ ಮಕಾನಾ ಮಂಡಳಿ ಮತ್ತು ಆಹಾರ ಸಂಸ್ಥೆ ಬಿಹಾರಕ್ಕೆ ಈ ಬಾರಿಯ ಭರ್ಜರಿ ಗುಡ್‌ನ್ಯೂಸ್. ಇದರಿಂದ ಬಿಹಾರದಲ್ಲಿ ಮಕಾನ ಉತ್ಪಾದನೆ. ಮಾರುಕಟ್ಟೆ ವ್ಯವಸ್ಥೆ ಅಭಿವೃದ್ಧಿಯಾಗಲಿದೆ ಎಂದು ನಿರೀಕ್ಷೆ ಮಾಡಲಾಗಿದೆ. ಬಿಹಾರದಲ್ಲಿ ರಾಷ್ಟ್ರೀಯ ಆಹಾರ ತಂತ್ರಜ್ಞಾನ ಅಭಿವೃದ್ಧಿಗೂ ಆದ್ಯತೆ ಕೊಡಲಾಗಿದೆ. ಸಂಗ್ರಹ ಹಾಗೂ ಸಂಸ್ಕರಣೆಗೆ ಉತ್ತೇಜನ ನೀಡಲಾಗಿದೆ.

# ಇದು "ಗ್ಯಾನ್" ಬಜೆಟ್ ; ಪ್ರಧಾನಿ ಮೋದಿ



ನವದೆಹಲಿ: ಪ್ರಸಕ್ತ ಸಾಲಿನ ಬಜೆಟ್ ಸಾಮಾನ್ಯ ಜನರಿಗೆ ಸೇರಿದ್ದು, ರೈತರು, ಮಹಿಳೆಯರು ಮತ್ತು ರಾಷ್ಟ್ರದ ಯುವ ಶಕ್ತಿಗಳ ಮೇಲೆ ಗಮನ ಹರಿಸಲಾಗಿದೆ. ಇದು ಗ್ಯಾನ್ (ಗರೀಬ್, ಯುವ, ಅನ್ನದಾತ, ರಾಣಿ) ಬಜೆಟ್ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ತಿಳಿಸಿದ್ದಾರೆ. ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸಂಸತ್ತಿನಲ್ಲಿ ಬಜೆಟ್ ಮಂಡಿಸುವ ಮುನ್ನ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ವಿಷಯ ತಿಳಿಸಿದ ಅವರು, ಹೆಚ್ಚುತ್ತಿರುವ ಮಧ್ಯಮ ವರ್ಗದ ಜನಸಂಖ್ಯೆಯ ಖರ್ಚು ಸಾಮರ್ಥ್ಯವನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ ಎಂದು ಹೇಳಿದರು.

ಪ್ರಧಾನಮಂತ್ರಿಯವರ ಹೇಳಿಕೆಯನ್ನು ಪ್ರತಿಧ್ವನಿಸಿದ ಅವರು, ಬಡವರು, ಯುವಕರು, ರೈತರು ಮತ್ತು ಮಹಿಳೆಯರನ್ನು ಮೇಲಕ್ಕೆತ್ತಲು ಹೆಚ್ಚಿನ ಗಮನ ನೀಡಲಾಗುವುದು ಎಂದು ಹೇಳಿದರು.

ಬಜೆಟ್‌ನ ಗಮನವು ಎಲ್ಲರನ್ನೂ ಒಳಗೊಳ್ಳುವ ಹಾದಿಯಲ್ಲಿ ಕೊಂಡೊಯ್ಯುತ್ತಿದೆ ಎಂದು ಅವರು ಹೇಳಿದರು. ನಮ್ಮ ದೇಶದ ಅಗಾಧ ಸಾಮರ್ಥ್ಯವನ್ನು ಅನ್ಲಾಕ್ ಮಾಡಲು ನಾವು ಪ್ರಯಾಣವನ್ನು ಪ್ರಾರಂಭಿಸುತ್ತೇವೆ. ಎಲ್ಲಾ ಪ್ರಮುಖ ಆರ್ಥಿಕತೆಗಳಲ್ಲಿ ನಮ ಆರ್ಥಿಕತೆಯು ವೇಗವಾಗಿ ಬೆಳೆಯುತ್ತಿದೆ. ಭಾರತದ ಸಾಮರ್ಥ್ಯದ ಮೇಲಿನ ವಿಶ್ವಾಸ ಮಾತ್ರ ಬೆಳೆದಿದೆ. ಹಣಕಾಸು ಸಚಿವರ ಪ್ರಕಾರ, 2025–2026ರ ಬಜೆಟ್‌ನ ಕೇಂದ್ರೀಕೃತ ಕ್ಷೇತ್ರಗಳು ಬೆಳವಣಿಗೆಯನ್ನು ವೇಗಗೊಳಿಸುವುದು, ಸುರಕ್ಷಿತ ಅಂತರ್ಗತ ಅಭಿವದ್ಧಿ, ಖಾಸಗಿ ವಲಯದ ಹೂಡಿಕೆಯನ್ನು ಉತ್ತೇಜಿಸುವುದು, ಮನೆಯ ವೆಚ್ಚವನ್ನು ಹೆಚ್ಚಿಸುವುದು ಮತ್ತು ಭಾರತದ ಏರುತ್ತಿರುವ ಮಧ್ಯಮ ವರ್ಗದ ವೆಚ್ಚದ ಶಕ್ತಿಯನ್ನು ಹೆಚ್ಚಿಸುವುದು ಎಂದು ವಿವರಿಸಿದರು.

# ಬಜೆಟ್; ಕಲಾಪದಿಂದ ಹೊರ ನಡೆದ ವಿಪಕ್ಷಗಳು




**ನವದೆಹಲಿ:** ಕೇಂದ್ರ ಸರ್ಕಾರವು ಜನ ವಿರೋಧಿ ಬಜೆಟ್ ಮಂಡನೆ ಮಾಡುತ್ತಿವೆ ಎಂದು ವಿರೋಧ ಪಕ್ಷಗಳು ಕಲಾಪದಿಂದ ಹೊರ ನಡೆದ ಘಟನೆ ಲೋಕಸಭೆಯಲ್ಲಿ ನಡೆಯಿತು. ಬೆಳಗ್ಗೆ 11 ಗಂಟೆಗೆ ಸರಿಯಾಗಿ ಹಣಕಾಸು ಸಚಿವೆ ನಿರ್ಮಲಾ ಸೀತರಾಮನ್ ಅವರು ಬಜೆಟ್ ಮಂಡಿಸಲು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಸೂಚನೆ ನೀಡಿದರು.

ಈ ವೇಳೆ ತಮ ಆಸನದಿಂದ ಎದ್ದು ನಿಂತು ಬಜೆಟ್ ಪುಸ್ತಕ ಓದಲು ನಿರ್ಮಲಾ ಸೀತರಾಮನ್ ಮುಂದಾಗುತ್ತಿದ್ದಂತೆ ಪ್ರತಿ ಪಕ್ಷಗಳ ಸದಸ್ಯರು ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿ ಸದನದಿಂದ ಹೊರನಡೆದರು.

ಇದು ಸಂಪೂರ್ಣವಾಗಿ ಜನ ವಿರೋಧಿ ಬಜೆಟ್. ಈ ಬಜೆಟ್‌ನಿಂದ ಯಾವುದೇ ಜನರಿಗೂ ಅನುಕೂಲವಾಗಿಲ್ಲ. ಕೇವಲ ಕಾರ್ಪೋರೇಟರ್‌ಗಳ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಬಜೆಟ್ ಮಂಡನೆ ಮಾಡಲಾಗುತ್ತಿದೆ ಎಂದು ಗದ್ದಲ ಎಬ್ಬಿಸಿದರು. ಈ ವೇಳೆ ಸ್ಪೀಕರ್ ಓಂ ಬಿರ್ಲಾ ಅವರು, ಇದು ನಿಮಗೆ ಶೋಭೆ ತರುವುದಿಲ್ಲ. ಹಣಕಾಸು ಸಚಿವರು ಬಜೆಟ್ ಮಂಡನೆ ಮಾಡುವುದನ್ನು ದೇಶದ ಜನತೆ ಎದುರು ನೋಡುತ್ತಿದ್ದಾರೆ. ನೀವು ನಿಮ ಘನತೆಗೆ ತಕ್ಕಂತೆ ನಡೆದುಕೊಳ್ಳಿ ಎಂದು ಸಿಟ್ಟಿನಿಂದಲೇ ಹೇಳಿದರು. ಗದ್ದಲದ ನಡುವೆಯೇ ಸೀತಾರಾಮನ್ ಬಜೆಟ್ ಮಂಡಿಸಲು ಮುಂದಾಗುತ್ತಿದ್ದಂತೆ ಪ್ರತಿಪಕ್ಷಗಳು ಸದನದಿಂದ ಹೊರನಡೆದರು.

# ರೈತರ ಬೇಡಿಕೆಗಳ ಬಗ್ಗೆ ಸಂಪೂರ್ಣ ಮೌನ: ಟೀಕೆ

**ನವದೆಹಲಿ:** ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಇಂದು ಶನಿವಾರ ಮಂಡಿಸಿದ ಬಜೆಟ್ ನಲ್ಲಿ ಕೇಂದ್ರ ಸರ್ಕಾರ ಪ್ರಕಟಿಸಿದ ಘೋಷಣೆಗಳ ಬಗ್ಗೆ ವಾಗ್ದಾಳಿ ನಡೆಸಿದೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕಾನೂನುಬದ್ಧ ಖಾತರಿಯಾಗಿ ಕನಿಷ್ಠ ಬೆಂಬಲ ಬೆಲೆ ಮತ್ತು ಕೃಷಿ ಸಾಲ ಮನ್ನಾ ಸೇರಿದಂತೆ ರೈತರ ಬೇಡಿಕೆಗಳ ಬಗ್ಗೆ ಸಂಪೂರ್ಣ ಮೌನವಾಗಿದ್ದಾರೆ ಎಂದು ಆರೋಪಿಸಿದೆ.

2025–26ರ ಕೇಂದ್ರ ಬಜೆಟ್ ತೆರಿಗೆ, ನಗರಾಭಿವೃದ್ಧಿ, ಗಣಿಗಾರಿಕೆ, ಹಣಕಾಸು ವಲಯ, ವಿದ್ಯುತ್ ಮತ್ತು ನಿಯಂತ್ರಕ ಚೌಕಟ್ಟಿನ ಆರು ಕ್ಷೇತ್ರಗಳಲ್ಲಿ ಸುಧಾರಣೆಗಳನ್ನು ಪ್ರಾರಂಭಿಸಲಿದೆ ಎಂದು ನಿರ್ಮಲಾ ಸೀತಾರಾಮನ್ ಹೇಳಿದರು.

ತಮ್ಮ ಬಜೆಟ್ ಭಾಷಣದಲ್ಲಿ, ಕಡಿಮೆ ಇಳುವರಿ, ಆಧುನಿಕ ಬೆಳೆ ತೀವ್ರತೆ ಮತ್ತು ಸರಾಸರಿಗಿಂತ ಕಡಿಮೆ ಸಾಲದ ನಿಯತಾಂಕಗಳನ್ನು ಹೊಂದಿರುವ 100 ಜಿಲ್ಲೆಗಳನ್ನು ಒಳಗೊಳ್ಳುವ ಪ್ರಧಾನ ಮಂತ್ರಿ ಧನ್ ಧ್ಯಾನ್ ಕೃಷಿ ಯೋಜನೆಯನ್ನು ಅವರು ಘೋಷಿಸಿದರು.

ಆದರೆ ಸರ್ಕಾರವನ್ನು ಟೀಕಿಸಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, "ವಿತ್ತಮಂತ್ರಿ ಕೃಷಿಯಿಂದ ಬಜೆಟ್ ಮಂಡನೆ ಪ್ರಾರಂಭ ಮಾಡಿದರು. ಆದರೆ ರೈತರ ಬೇಡಿಕೆಗಳು ಮತ್ತು ಕೃಷಿ ಸಂಸದೀಯ ಸ್ಥಾಯಿ ಸಮಿತಿಯ ಶಿಫಾರಸುಗಳ ಬಗ್ಗೆ ಸಂಪೂರ್ಣವಾಗಿ ಮೌನವಾಗಿದ್ದಾರೆ.

ಕಾನೂನು ಖಾತರಿಯಾಗಿ ಎಂಎಸ್ ಪಿ, ಕೃಷಿ ಸಾಲ ಮನ್ನಾ, ಪಿಎಂ ಕಿಸಾನ್ ಪಾವತಿಗಳ ಹಣದುಬ್ಬರ ಸೂಚ್ಯಂಕ ಮತ್ತು ಪಿಎಂ ಫಸಲ್ ಬಿಮಾ ಯೋಜನೆಗೆ ಸುಧಾರಣೆಗಳು ಇತ್ಯಾದಿಗಳ ಬಗ್ಗೆ ಮಾತನಾಡಲೇ ಇಲ್ಲ ಎಂದು ಹೇಳಿದ್ದಾರೆ.

ಮತ್ತೊಂದು ಪೋಸ್ಟ್‌ನಲ್ಲಿ ಜೈರಾಮ್ ರಮೇಶ್, "ಫೇಕ್ ಇನ್ ಇಂಡಿಯಾ ಆಗಿ ಮಾರ್ಪಟ್ಟ ಮೇಕ್ ಇನ್ ಇಂಡಿಯಾ ಈಗ ರಾಷ್ಟ್ರೀಯ ಉತ್ಪಾದನಾ ಮಿಷನ್" ಎಂಬ ಹೊಸ ಹೆಸರು ಪಡೆದುಕೊಂಡಿದೆ ಎಂದರು.

# ಮಧ್ಯಮ ವರ್ಗಕ್ಕೆ ಸರ್ ಪ್ರೈಸ್ ಗಿಫ್ಟ್: ಬೊಮ್ಮಾಯಿ

**ನವದೆಹಲಿ:** ಕೇಂದ್ರದ ಬಜೆಟ್‌ನಲ್ಲಿ ಮಧ್ಯಮ ವರ್ಗಕ್ಕೆ ಸರಪ್ರೈಸ್ ಗಿಫ್ಟ್ ಕೊಟ್ಟಿದ್ದು, ಇದರಿಂದ ಮಧ್ಯಮ ವರ್ಗದವರ ಉಳಿತಾಯ ಹೆಚ್ಚಲಿದೆ. ಇದೊಂದು ಆರ್ಥಿಕ ಮತ್ತು ಸಾಮಾಜಿಕ ವಲಯದಲ್ಲಿ ಸಮತೋಲನ ಕಾಯ್ದುಕೊಂಡಿರುವ ಬಜೆಟ್ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯ ಪಟ್ಟಿದ್ದಾರೆ.

ಮಧ್ಯಮವರ್ಗದ ಜನರ ನಿರೀಕ್ಷೆಗಳಿಗೆ ಬೂಸ್ಟ್ ನೀಡಿದೆ. ಮಧ್ಯಮ ವರ್ಗದ ಉಳಿತಾಯ ಹೆಚ್ಚಿಸಿದೆ. ಇದೊಂದು ಮಧ್ಯಮ ವರ್ಗದವರಿಗೆ ಸರ್ಪ್ರೈಸ್ ಗಿಫ್ಟ್. ಎಲ್ಲರೂ 10 ಲಕ್ಷ ತೆರಿಗೆ ವಿನಾಯಿತಿ ನಿರೀಕ್ಷೆ ಮಾಡಿದ್ದರು. ಆದರೆ, ಪಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 12 ಲಕ್ಷದವರೆಗೆ ತೆರಿಗೆ ವಿನಾಯಿತಿ ನೀಡಿ ಸರ್ಪ್ರೈಸ್ ಗಿಫ್ಟ್ ನೀಡಿದ್ದಾರೆ ಎಂದರು. ರಾಜ್ಯಗಳಿಗೆ 1.5 ಲಕ್ಷ ಕೋಟಿ ರೂ. 50 ವರ್ಷಗಳವರೆಗೆ ಬಡ್ಡಿ ರಹಿತ ಸಾಲ ಘೋಷಿಸಲಾಗಿದ್ದು, ಇದರಿಂದ ಕರ್ನಾಟಕಕ್ಕೂ 7ರಿಂದ 8 ಸಾವಿರ ಕೋಟಿ ರೂ. ಸಾಲ ದೊರೆಯುವ ಸಾಧ್ಯತೆ ಇದೆ. ನವ ತಂತಜ್ಞಾನಕ್ಕೆ ಬಹಳಷ್ಟು ಒತ್ತು ಕೊಟ್ಟಿರುವ ಬಜೆಟ್ ಇದಾಗಿದೆ ಎಂದು ಹೇಳಿದರು.

# ಅತೀ ದೊಡ್ಡ ಲಾಜಿಸ್ಟಿಕ್ ಸಂಸ್ಥೆಯಾಗಲಿರುವ ಅಂಚೆ ವ್ಯವಸ್ಥೆ

**ನವದೆಹಲಿ:** ಗ್ರಾಮೀಣ ಪ್ರದೇಶದಲ್ಲಿ 1.5 ಲಕ್ಷ ಸ್ಥಾಪನೆಯೊಂದಿಗೆ ಭಾರತೀಯ ಅಂಚೆಯನ್ನು ದೇಶದ ಅತಿ ದೊಡ್ಡ ಲಾಜಿಸ್ಟಿಕ್ ಸಂಸ್ಥೆಯಾಗಿ ರೂಪಾಂತರಗೊಳಿಸುವ ಯೋಜನೆಯನ್ನು ಹೊಂದಲಾಗಿದೆ ಎಂದು ನಿರ್ಮಲಾ ಸೀತಾರಾಮನ್ ಬಜೆಟ್‌ನಲ್ಲಿ ಘೋಷಿಸಿದ್ದಾರೆ. ಸಂಸತ್ತಿನಲ್ಲಿ ಎಂಟನೇ ಬಾರಿ ಬಜೆಟ್ ಮಂಡಿಸಿದ ನಿರ್ಮಲಾ ಸೀತಾರಾಮನ, ಹಲವು ಯೋಜನೆಗಳನ್ನು ಘೋಷಿಸಿದ್ದು, ಇದರಲ್ಲಿ ದೇಶದ ಅತಿ ದೊಡ್ಡ ಅಂಚೆ ಸೇವೆಯಾಗಿರುವ ಭಾರತೀಯ ಅಂಚೆಯನ್ನು ಗ್ರಾಮೀಣ ಆರ್ಥಿಕತೆಗೆ ವೇಗವರ್ಧಕವಾಗಿ ಮಾಡಲು 1.5 ಲಕ್ಷ ಗ್ರಾಮಾಂತರ ಅಂಚೆ ಕಚೇರಿ ಸ್ಥಾಪಿಸುವ ಮೂಲಕ ದೊಡ್ಡ ಲಾಜಿಸ್ಟಿಕ್‌ಸೇವಾ ಸಂಸ್ಥೆಯಾಗಿ ರೂಪಿಸಲಾಗುವುದು ಎಂದರು. ಇದೇ ವೇಳೆ ಅಸ್ಸಾಂನಲ್ಲಿ 12.7 ಲಕ್ಷ ಟನ್‌ಸಾಮರ್ಥ್ಯದ ಯೂರಿಯಾ ಘಟಕ ಸ್ಥಾಪಿಸುವ ಕುರಿತು ಘೋಷಿಸಿದರು. ಹಣಕಾಸು ಸಚಿವರು ಹೂಡಿಕೆ ಮತ್ತು ವಹಿವಾಟು ಮಿತಿ ಹೆಚ್ಚಿಸುವುದಾಗಿ ಘೋಷಿಸಿದರು.ಗುಣಮಟ್ಟದ ಉತ್ಪನ್ನಗಳೊಂದಿಗೆ ಎಂಎಸ್‌ಎಂಇ ಶೇ. 45ರಷ್ಟು ನಮ್ಮ ರಫ್ತಿನ ಜವಾಬ್ದಾರಿ ಹೊಂದಿರುತ್ತದೆ ಎಂದರು. ಎಂಎಸ್‌ಎಂಇಗಳಿಗೆ ಸಾಲದ ಸೌಲಭ್ಯ ಸುಧಾರಣೆಗೆ ಕ್ರೆಡಿಟ್‌ಗ್ಯಾರಂಟಿ ಕವರ್‌ಗೆ ಉತ್ತೇಜಿಸಲಾಗುವುದು ಎಂದರು. ಗ್ರಾಮೀಣ ಆರ್ಥಿಕತೆಗೆ ಸಾಲ ನೀಡುವ ಕಾರ್ಯಾಚರಣೆಗಳಿಗಾಗಿ ಕೇಂದ್ರವು ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮಕ್ಕೆ ಬೆಂಬಲವನ್ನು ನೀಡುತ್ತಿದೆ.

# ಮಧುಬನಿಯಲ್ಲಿ ಮನ ಸೆಳೆದ ನಿರ್ಮಲಾ



**ನವದೆಹಲಿ:**ಕೇಂದ್ರ ಹಣಕಾಸು ಸಚಿವೆ ನಿರ್ಮಲಾಸೀತಾರಾಮನ್ ಅವರು ಪ್ರತಿ ಬಾರಿಯೂ ಬಜೆಟ್ ಮಂಡಿಸುವ ಸಮಯದಲ್ಲಿ ಅವರು ಧರಿಸುವ ಸೀರೆ ಎಲ್ಲರ ಗಮನ ಸೆಳೆಯುತ್ತದೆ. ಈ ಬಾರಿಯೂ ಬಿಹಾರದ ಸುಪ್ರಸಿದ್ಧ ಮಧುಬನಿ ಕಲೆ ಇರುವ ಸೀರೆಯುಟ್ಟು ಬಜೆಟ್ ಮಂಡಿಸಿದ್ದು ವಿಶೇಷವಾಗಿತ್ತು. ಈ ಮೂಲಕ ಮಧುಬನಿ ಕಲೆ ಮತ್ತು ಪದ್ಮಪ್ರಶಸ್ತಿ ಪುರಸ್ಕೃತೆ ದುಲಾರಿದೇವಿ ಅವರಿಗೆ ಗೌರವ ಸಮರ್ಪಿಸಿದ್ದಾರೆ.

ಇತ್ತೀಚೆಗೆ ನಿರ್ಮಲಾ ಅವರು ಮಿಥಿಲಾ ಆರ್ಟ್ ಇನ್ಸಿಟ್ಯೂಟ್‌ಗೆ ಹೋಗಿದ್ದಾಗ ದುಲಾರಿದೇವಿಯನ್ನು ಭೇಟಿಯಾಗಿದ್ದರು. ಬಿಹಾರದಲ್ಲಿ ಮಧುಬನಿ ಕಲೆಯ ಕುರಿತು ಚರ್ಚೆ ನಡೆಸಿದ್ದರು. ಈ ಸಂದರ್ಭದಲ್ಲಿ ದುಲಾರಿದೇವಿ ಅವರು ನಿರ್ಮಲಾ ಅವರಿಗೆ ಸೀರೆಯನ್ನು ನೀಡಿ ಮುಂಗಡಪತ್ರ ಮಂಡಿಸುವ ದಿನದಂದು ಈ ಸೀರೆಯನ್ನು ಧರಿಸುವಂತೆ ಮನವಿ ಮಾಡಿದ್ದರು. ಅದರಂತೆ ಈ ಸೀರೆಯನ್ನು ಧರಿಸಿ ಹಣಕಾಸು ಸಚಿವರು ಬಜೆಟ್ ಮಂಡಿಸಿದ್ದಾರೆ. ದುಲಾರಿ ಅವರಿಗೆ 2021ರಲ್ಲಿ ಪದ್ಮಶ್ರೀ ಗೌರವ ನೀಡಿ ಗೌರವಿಸಲಾಯಿತು.

ಕೆನೆ ಬಣ್ಣ, ಚಿನ್ನ ವರ್ಣದ ಅಂಚು ಹೊಂದಿರುವ ಈ ಸೀರೆ ಅತ್ಯಾಕರ್ಷಕವಾಗಿದ್ದು, ಮಧುಬನಿ ಕಲೆಯ ಚಿತ್ತಾರ ಕಂಗೊಳಿಸುತ್ತಿದೆ. 2019ರಲ್ಲಿ ಮೊದಲ ಬಜೆಟ್ ಮಂಡನೆ ಮಾಡಿದ್ದ ಸೀತಾರಾಮನ್ ಚಿನ್ನದ ಗಡಿಯೊಂದಿಗೆ ಸರಳವಾದ ಗುಲಾಬಿ ಮಂಗಳಗಿರಿ ಸೀರೆ ಧರಿಸಿದ್ದರು. ನಂತರದ ಬಜೆಟ್ ಮಂಡನೆಯ ವೇಳೆ ವಿವಿಧ ಮಾದರಿಯ ಕಸೂತಿಯ ಸೀರೆ ಧರಿಸಿ ಕೆಲಗೆ ಬೆಲೆ ನೀಡುವ ಕೆಲಸ ಮಾಡಿದ್ದಾರೆ.

2020 ರಲ್ಲಿ, ದೇಶದ ಬಜೆಟ್ ಪ್ರಸ್ತುತಪಡಿಸಲು ಪ್ರಕಾಶಮಾನವಾದ ಹಳದಿ-ಚಿನ್ನದ ರೇಷ್ಮೆ ಸೀರೆ ಆರಿಸಿಕೊಂಡರು. ಇದಾದ ಒಂದು ವರ್ಷದ ನಂತರ, ಸಚಿವರು ಕೆಂಪು ಮತ್ತು ಬಿಳಿ ಬಣ್ಣದ ರೇಷ್ಮೆ ಪೋಚಂಪಲ್ಲಿ ಸೀರೆಯಲ್ಲಿ ಗಮನ ಸೆಳೆದಿದ್ದರು. ಇಕತ್ ಮಾದರಿ ಮತ್ತು ಹಸಿರು ಗಡಿಯೊಂದಿಗೆ ಧರಿಸಿ ಬಜೆಟ್ ಮಂಡಿಸಿದರು. ಪೊಚಂಪಲ್ಲಿ ಇಕತ್ ಸಾಂಪ್ರದಾಯಿಕವಾಗಿ ತೆಲಂಗಾಣದಲ್ಲಿ ತಯಾರಿಸಲಾಗುತ್ತದೆ.

2022 ರಲ್ಲಿ ಸಚಿವರು ತುಕ್ಕು ಹಿಡಿದ ಕಂದು ಬಣ್ಣದ ಬೊಮ್ಮೈ ಸೀರೆ ಆಯ್ಕೆ ಮಾಡಿಕೊಂಡರು, ಜೊತೆಗೆ ಬಿಳಿ ಬಣ್ಣದ ಬಾರ್ಡರ್ ವಿವರಗಳನ್ನು ನೀಡಿದರು. 2023ರಲ್ಲಿ ಕೇಂದ್ರ ಬಜೆಟ್ ಮಂಡಿಸುವಾಗ ಕಸುತಿದಾರದ ಕೆಂಪು ಮತ್ತು ಕಪ್ಪು ಟೆಂಪಲ್ ಬಾರ್ಡರ್ ಸೀರೆ ಧರಿಸಿದ್ದರು. ಕಳೆದ ವರ್ಷ ಕಂಠ ಕರಕುಶಲತೆಯೊಂದಿಗೆ ನೀಲಿ ಟಸ್ಸಾರ್ ರೇಷ್ಮೆ ಸೀರೆ ಧರಿಸಿದ್ದರು. ಟಸ್ಸಾರ್ ರೇಷ್ಮೆಯು ಅದರ ವಿಶಿಷ್ಟ ವಿನ್ಯಾಸ ಮತ್ತು ಚಿನ್ನದ ಹೊಳಪಿಗೆ ಹೆಸರುವಾಸಿಯಾಗಿದೆ.

# 'ಗ್ಯಾರಂಟಿ'ಗಳ ನಡುವೆ ಮಹಿಳೆಯರಿಗೆ ಗುಡ್ ನ್ಯೂಸ್

ನವದೆಹಲಿ: ಚುನಾವಣೆಯ ಸಂದರ್ಭದಲ್ಲಿ ಹಲವು ರಾಜ್ಯಗಳಲ್ಲಿ ಗ್ಯಾರಂಟಿ ಯೋಜನೆಗಳ ಅಬ್ಬರ ಜೋರಾಗಿದೆ. ಹಲವು ಗ್ಯಾರಂಟಿ ಯೋಜನೆಗಳನ್ನ ನೀಡುವ ಮೂಲಕ ಹಲವು ಕಡೆ ಪಕ್ಷಗಳು ಅಧಿಕಾರಕ್ಕೆ ಬಂದಿದ್ದು, ಇದೀಗ ಗ್ಯಾರಂಟಿ ಯೋಜನೆಗಳ ನಡುವೆ ಪ್ರಧಾನಿ ನರೇಂದ್ರ ಮೋದಿ ಸರ್ಕಾರದ ಬಜೆಟ್ ಕೂಡ ಮಹಿಳೆಯವರಿಗೆ ಭರ್ಜರಿ ಗುಡ್ ನ್ಯೂಸ್ ನೀಡಿದೆ.




ಪ್ರಧಾನಿ ನರೇಂದ್ರ ಮೋದಿ ಅವರು ಮೂರನೇ ಬಾರಿಗೆ ಅಧಿಕಾರ ವಹಿಸಿಕೊಂಡ ನಂತರ ಕೇಂದ್ರ ಸರ್ಕಾರ ತನ್ನ 2 ನೇ ಪೂರ್ಣ ಬಜೆಟ್ ಮಂಡನೆಯಾಗುತ್ತಿದ್ದು, ಈ ಬಜೆಟ್‌ನಲ್ಲಿ ಮಹಿಳೆಯರಿಗೆ ಕೇಂದ್ರ ಭರ್ಜರಿ ಶುಭ ಸುದ್ದಿ ನೀಡಿದೆ. ಉದ್ಯಮ ಕ್ಷೇತ್ರದಲ್ಲಿ ಮಹಿಳೆಯರ ಉತ್ತೇಜನಕ್ಕೆ ಹೊಸ ಯೋಜನೆ ಘೋಷಣೆ ಮಾಡಲಾಗಿದೆ. ಇದರಿಂದ 22 ಲಕ್ಷ ಮಹಿಳಾ ಉದ್ಯಮಿಗಳಿಗೆ ಅನುಕೂಲವಾಗಲಿದೆ ಎಂದು ತಿಳಿಸಲಾಗಿದೆ.

ಕೇಂದ್ರ ಸರ್ಕಾರವು ಈ ಬಾರಿಯ ಬಜೆಟ್‌ನಲ್ಲಿ ಮಧ್ಯಮ, ಸಣ್ಣ ಹಾಗೂ ಅತಿ ಸಣ್ಣ ಕೈಗಾರಿಕಾ ವಲಯಕ್ಕೆ (ಎಂಎಸ್‌ಎಂಇ) ಭರ್ಜರಿ ಕೊಡುಗೆ ನೀಡಲಾಗಿದೆ. ಮೊದಲ ಬಾರಿ ಉದ್ಯಮ ಆರಂಭಿಸುವ ಎಸ್‌ಸಿ, ಎಸ್‌ಟಿ ಸಮುದಾಯದವರು ಹಾಗೂ ಮಹಿಳೆಯರಿಗೆ 2 ಕೋಟಿ ರೂಪಾಯಿವರೆಗೂ ಸಾಲ ನೀಡುವುದಾಗಿ ಘೋಷಣೆ ಮಾಡಲಾಗಿದೆ. ಎಂಎಸ್‌ಎಂಇ ವಲಯಕ್ಕೆ ಹೊಸ ಯೋಜನೆಗಳನ್ನು ಘೋಷಿಸಲಾಗಿದೆ. 7.5 ಕೋಟಿ ಜನರಿಗೆ ಉದ್ಯೋಗ ನೀಡಿರುವ 1 ಕೋಟಿಗೂ ಹೆಚ್ಚು ಎಂಎಸ್‌ಎಂಇ ಈಗಿವೆ. ಇವುಗಳ ಸಾಲ ಸೌಲಭ್ಯವನ್ನು ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಂಡಿದೆ. ಅತಿ ಸಣ್ಣ ಉದ್ಯಮಗಳಿಗೆ ಸಾಲದ ಮಿತಿಯನ್ನು 5 ಕೋಟಿಯಿಂದ 10 ಕೋಟಿ ರೂಪಾಯಿಗಳಿಗೆ ಹೆಚ್ಚಿಸಲಾಗುವುದು, ಸ್ಟಾರ್ಟ್‌ಅಪ್‌ಗಳಿಗೂ ಸಹ 10 ಕೋಟಿ ರೂ.ವರೆಗೆ ಸಾಲ ಸಿಗಲಿದೆ, ಉತ್ತಮವಾಗಿ ನಡೆಯುತ್ತಿರುವ ರಫ್ತುದಾರ ಎಂಎಸ್‌ಎಂಇಗಳಿಗೆ 20 ಕೋಟಿ ರೂ.ಗಳವರೆಗೆ ದೀರ್ಘಾವಧಿ ಸಾಲಗಳು ನೀಡಲಾಗುವುದು ಎಂದು ಸೀತಾರಾಮನ್ ಮಂಡನೆ ವೇಳೆ ತಿಳಿಸಿದ್ದಾರೆ.

# ಸ್ಟಾರ್ಟ್‌ಅಪ್‌ಗಳಿಗೆ 10 ಸಾವಿರ ಕೋಟಿ ರೂ. ಘೋಷಣೆ

**ನವದೆಹಲಿ:** ಉದಯೋನ್ಮುಖ ಉದ್ಯಮಿಗಳ ಬೆಳವಣಿಗೆಯನ್ನು ಉತ್ತೇಜಿಸಲು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬಜೆಟ್‌ನಲ್ಲಿ ಸ್ಟಾರ್ಟ್‌ಅಪ್‌ಗಳಿಗೆ ಮಹತ್ವದ ಯೋಜನೆ ಘೋಷಣೆ ಮಾಡಿದ್ದಾರೆ. ಸರ್ಕಾರವು ಸ್ಟಾರ್ಟ್‌ಅಪ್‌ಗಳಿಗೆ ಮೂಲಕ ನಾವೀನ್ಯತೆಯನ್ನು ಉತ್ತೇಜಿಸುವತ್ತ ಗಮನಹರಿಸುತ್ತಿರುವ ಹಿನ್ನೆಲೆ ಈ ಘೋಷಣೆ ಮಾಡುವುದು ತುಂಬಾ ಮಹತ್ವದ್ದಾಗಿದೆ.



ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆ (ಡಿಪಿಐಐಟಿ) ಇಲ್ಲಿಯವರೆಗೆ 1.5 ಲಕ್ಷಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳನ್ನು ಗುರುತಿಸಲಾಗಿದೆ.

ಜನವರಿ 16, 2016 ರಂದು ಸ್ಟಾರ್ಟ್‌ಅಪ್ ಇಂಡಿಯಾಕ್ಕಾಗಿ ಕ್ರಿಯಾ ಯೋಜನೆ ಅನಾವರಣ ಮಾಡಲಾಗಿತ್ತು.

ಸ್ಟಾರ್ಟ್‌ಅಪ್‌ಗಳಿಗೆ ಹಣಕಾಸಿನ ಅಗತ್ಯಗಳನ್ನು ಪೂರೈಸಲು ಇದೀಗ 10,000 ಕೋಟಿ ರೂ. ನಿಧಿ ಯೋಜನೆ ಆರಂಭಿಸಲಾಗುವುದು. ಡಿಪಿಐಐಟಿ ಮೇಲ್ವಿಚಾರಣಾ ಸಂಸ್ಥೆಯಾಗಿದ್ದು, ಭಾರತೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್ (ಎಸ್‌ಐಡಿಬಿಐ) ಎಫ್‌ಎಫ್‌ಎಸ್‌ಗೆ ಕಾರ್ಯಾಚರಣಾ ಸಂಸ್ಥೆಯಾಗಿ ಕೆಲಸ ಮಾಡಲಿದೆ.

ಯೋಜನೆಯ ಪ್ರಗತಿ ಮತ್ತು ನಿಧಿಯ ಲಭ್ಯತೆಯ ಆಧಾರದ ಮೇಲೆ 14 ಮತ್ತು 15ನೇ ಹಣಕಾಸು ಆಯೋಗದ ಚಕ್ರಗಳಲ್ಲಿ ಒಟ್ಟು 10,000 ಕೋಟಿ ರೂ. ನಿಧಿಯನ್ನು ಒದಗಿಸಲು ಯೋಜಿಸಲಾಗಿದೆ.

ಈ ಯೋಜನೆಯಲ್ಲಿ ಮೂರು ಹಂತಗಳಲ್ಲಿ ಸ್ಟಾರ್ಟ್‌ಅಪ್‌ಗಳಿಗೆ ಬಂಡವಾಳ ಲಭ್ಯವಾಗುವಂತೆ ಮಾಡುವುದಲ್ಲದೆ,

ದೇಶೀಯ ಬಂಡವಾಳವನ್ನು ಸಂಗ್ರಹಿಸಲು ಅನುಕೂಲವಾಗುವಂತೆ, ವಿದೇಶಿ ಬಂಡವಾಳದ ಮೇಲಿನ ಅವಲಂಬನೆ ಕಡಿಮೆ ಮಾಡಲು ಹಾಗೂ ದೇಶೀಯ, ಹೊಸ ಸಾಹಸೋದ್ಯಮ ಬಂಡವಾಳ ನಿಧಿಗಳನ್ನು ಪ್ರೋತ್ಸಾಹಿಸುವ ವಿಷಯದಲ್ಲಿ ತ್ವರಿತ ಕ್ರಮ ಕೈಗೊಳ್ಳುವತ್ತಗಮನ ಹರಿಸಲಾಗುವುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದರು.



ದೆಹಲಿಯ ಕಸ್ತೂರ್ಬನಗರ ವಿಧಾನಸಭೆ ಕ್ಷೇತ್ರದ ಡಿಫೆನ್ಸ್ ಕಾಲೋನಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಅಭಿಷೇಕ್ ದತ್ ಪರ ಡಿಸಿಎಂ ಡಿ ಕೆ ಶಿವಕುಮಾರ್ ಶನಿವಾರ ಚುನಾವಣೆ ಪ್ರಚಾರ ಮಾಡಿದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಮೈಸೂರಿನ ಅಪೋಲೋ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಾಜಿ ಕೇಂದ್ರ ಸಚಿವರೂ, ಮಾಜಿ ರಾಜ್ಯಪಾಲರೂ ಆಗಿದ್ದ ರಾಚಯ್ಯ ಅವರ ಶ್ರೀಮತಿ ಮತ್ತು ಶಾಸಕರಾದ ಎ.ಆರ್.ಕೃಷ್ಣಮೂರ್ತಿ ಅವರ ತಾಯಿಯವರನ್ನು ಭೇಟಿಯಾಗಿ ಆರೋಗ್ಯ ವಿಚಾರಿಸಿದರು. ಬೇಗ ಗುಣಮುಖರಾಗುವಂತೆ ಹಾರೈಸಿದರು.'

## ನಕ್ಸಲ್ ರವಿ ಶರಣಾಗತಿ

**ಬೆಂಗಳೂರು:** ನಕ್ಸಲ್ ಚಳವಳಿಯಲ್ಲಿ ಸಕ್ರಿಯನಾಗಿದ್ದ ಕೋಟೆಹೊಂಡ ರವಿ ಅಲಿಯಾಸ್ ರವೀಂದ್ರ ನೆಮ್ಮಾರ್ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿಯಿಂದ 4 ಕಿ.ಮೀ ದೂರದಲ್ಲಿನ ಅರಣ್ಯ ಇಲಾಖೆಯ ಐಬಿಯಲ್ಲಿ ಪೊಲೀಸರ ಮುಂದೆ ಶರಣಾಗಿದ್ದಾರೆ. ಇದರೊಂದಿಗೆ ರಾಜ್ಯದಲ್ಲಿ ನಕ್ಸಲೀಯರ ಯುಗ ಅಂತ್ಯವಾಗಿದೆ.



ಇತ್ತೀಚೆಗಷ್ಟೇ ಶರಣಾದ ಆರು ಮಂದಿ ನಕ್ಸಲರ ತಂಡದಲ್ಲಿದ್ದ ರವಿ. ವಿಕ್ರಂಗೌಡ ಎನ್‌ಕೌಂಟರ್ ಸಂದರ್ಭದಲ್ಲಿ ಚದುರಿದ್ದ ತಂಡದಿಂದ ಬೇರ್ಪಟ್ಟಿದ್ದು ಇದೀಗ ಪೊಲೀಸರ ಮುಂದೆ ಶರಣಾಗತರಾಗಿದ್ದಾರೆ. ನಕ್ಸಲ್ ರವಿ ಕೋಟೆ ಹೊಂಡ ಶರಣಾಗತಿಯಿಂದಾಗಿ ಪಶ್ಚಿಮ ಘಟ್ಟದಲ್ಲಿ ಶಸ್ತ್ರಾಸ್ತ್ರ ಹೋರಾಟದಲ್ಲಿ ತೊಡಗಿಸಿಕೊಂಡಿದ್ದ ಎಲ್ಲಾ ಮಾವೋವಾದಿಗಳು ಮುಖ್ಯವಾಹಿನಿಗೆ ಬಂದಂತಾಗಿದೆ. ಕೊನೆಯ ಭೂಗತ ನಕ್ಸಲ್ (ಯುಜಿ ನಕ್ಸಲ್) ಎಂದು ಗುರುತಿಸಲ್ಪಟ್ಟಿದ್ದ ಕೋಟೆಹೊಂಡ ರವಿ ಸಮಾಜದ ಮುಖ್ಯವಾಹಿನಿ ಬರಲು ಶರಣಾಗಿ ಹೊಂದಿದ್ದು,ಅವರನ್ನು ಶರಣಾಗತಿ ಪ್ರಕ್ರಿಯೆಗಾಗಿ ಚಿಕ್ಕಮಗಳೂರಿಗೆ ಕರೆದೊಯ್ಯಲಾಗಿದೆ.

**ನಾಳೆ ಲಕ್ಷ್ಮೀ ಶರಣಾಗತಿ:** ಇನ್ನು ಹಲವು ವರ್ಷಗಳಿಂದ ಅರಣ್ಯದ ಹೊರಭಾಗದಲ್ಲಿದ್ದು ಭೂಗತರಾಗಿದ್ದ ಮಹಿಳಾ ಮಾವೋವಾದಿ ತೊಂಬಟ್ಟು ಲಕ್ಷ್ಮೀ ನಾಳೆ ಶರಣಾಗತರಾಗಲಿದ್ದಾರೆ. ಚಿಕ್ಕಮಗಳೂರು ಅಥವಾ ಉಡುಪಿಯಲ್ಲಿ ಪೊಲೀಸರ ಮುಂದೆ ಇವರು ಶರಣಾಗತಾಗಲಿದ್ದಾರೆ.

# ಕರ್ನಾಟಕ ಪಬ್ಲಿಕ್ ಸ್ಕೂಲ್ ಅಭಿವೃದ್ಧಿಗೆ 2,000 ಕೋಟಿ ರೂ. ಸಾಲ

**ಶಿವಮೊಗ್ಗ:** ರಾಜ್ಯದಲ್ಲಿ ಹೊಸದಾಗಿ ಆರಂಭಿಸಲಾಗುತ್ತಿರುವ 450 ಕರ್ನಾಟಕ ಪಬ್ಲಿಕ್ ಶಾಲೆ (ಕೆಪಿಎಸ್)ಗಳಲ್ಲಿ ಮೂಲ ಸೌಕರ್ಯ ಕಲ್ಪಿಸಲು ಏಷ್ಯಾ ಅಭಿವೃದ್ಧಿ ಬ್ಯಾಂಕ್ 2,000 ಕೋಟಿ ರೂ. ದೀರ್ಘಾವಧಿ ಸಾಲ ನೀಡಲು ಮುಂದಾಗಿದೆ ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಹೇಳಿದರು.




ಇದರೊಂದಿಗೆ ರಾಜ್ಯ ಸರ್ಕಾರ 500 ಕೋಟಿ ಅನುದಾನ ನೀಡಲಿದೆ ಎಂದು ಮಾಹಿತಿ ನೀಡಿದ ಸಚಿವರು, ಎಡಿಬಿ ಸಾಲಗಳನ್ನು ಸುಲಭವಾಗಿ ಮಂಜೂರು ಮಾಡುವುದಿಲ್ಲ, ಎಡಿಬಿ ಮೊದಲ ಬಾರಿಗೆ ರಾಜ್ಯದ ಶಿಕ್ಷಣ ಇಲಾಖೆಗೆ ಸಾಲವನ್ನು ಮಂಜೂರು ಮಾಡಿದೆ ಎಂದರು. ಶಿಕ್ಷಣ ಇಲಾಖೆ ಹಲವಾರು ಸವಾಲುಗಳನ್ನು ಎದುರಿಸುತ್ತಿದೆ, ಜನರು ಈ ಸಮಸ್ಯೆಗಳನ್ನು ಪರಿಹರಿಸಲು ನಮ್ಮನ್ನು ಅಧಿಕಾರಕ್ಕೆ ತಂದಿದ್ದಾರೆ ಎಂದರು.

ಈ ಅನುದಾನದಲ್ಲಿ ಕೆಪಿಎಸ್ ಶಾಲೆಗಳಿಗೆ ನೂತನ ಕಟ್ಟಡ, ಮೈದಾನ ಸೇರಿದಂತೆ ಅಗತ್ಯ ಸೌಲಭ್ಯ ಕಲ್ಪಿಸಲು 6 ಕೋಟಿಯಿಂದ - 8 ಕೋಟಿಯವರೆಗೆ ವ್ಯಯಿಸಲಾಗುವುದು. ಪಾಲಕರಿಂದ ಬೇಡಿಕೆ ಹೆಚ್ಚುತ್ತಿರುವ ಕಾರಣ ಮುಂಬರುವ ಶೈಕ್ಷಣಿಕ ವರ್ಷದಿಂದ ಎಲ್ಲ ಸರ್ಕಾರಿ ಶಾಲೆಗಳಲ್ಲೂ ಎಲ್‌ಕೆಜಿ-ಯುಕೆಜಿ ವಿಭಾಗ ಆರಂಭಿಸಲು ನಿರ್ಧರಿಸಲಾಗಿದೆ. ಇಲ್ಲಿಯವರೆಗೆ ಆಯ್ದ ಶಾಲೆಗಳಲ್ಲಿ ಪ್ರಾಯೋಗಿಕವಾಗಿ ಈ ತರಗತಿಗಳು ನಡೆಯುತ್ತಿವೆ ಎಂದರು.

ಸರ್ಕಾರಿ ಪದವಿಪೂರ್ವ ಕಾಲೇಜುಗಳ 25,000 ವಿದ್ಯಾರ್ಥಿಗಳಿಗೆ ಕಳೆದ ವರ್ಷ ನೀಟ್, ಸಿಇಟಿ ತರಬೇತಿ ನೀಡಲಾಗಿತ್ತು. ಈ ವರ್ಷದಿಂದ ಯಾವುದೇ ಮಿತಿ ಇರುವುದಿಲ್ಲ. ಎಲ್ಲ ವಿದ್ಯಾರ್ಥಿಗಳಿಗೂ ತರಬೇತಿಯ ವ್ಯವಸ್ಥೆ ಮಾಡಲಾಗುವುದು ಎಂದು ಅವರು ಹೇಳಿದರು.

# ಹೆಚ್.ಡಿ.ಕುಮಾರಸ್ವಾಮಿ ವಿರುದ್ಧದ ಆರೋಪ: ತನಿಖೆಗಾಗಿ ಎಸ್‌ಐಟಿ ರಚನೆ



**ಬೆಂಗಳೂರು:** ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಅವರ ಕುಟುಂಬದ ಸದಸ್ಯರು ಮತ್ತು ಸಂಬಂಧಿಗಳು ರಾಮನಗರ ಜಿಲ್ಲೆ ಬಿಡದಿ ಹೋಬಳಿಯ ಕೇತಗಾನಹಳ್ಳಿಯಲ್ಲಿ ಸರ್ಕಾರಿ ಜಮೀನುಗಳನ್ನು ಕಬಳಿಸಿದ್ದಾರೆ ಎಂಬ ಆರೋಪದ ಕುರಿತು ತನಿಖೆ ನಡೆಸಲು ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತ ಅಮ್ಲಾನ್ ಆದಿತ್ಯ ಬಿಸ್ವಾಸ್ ಅಧ್ಯಕ್ಷತೆಯಲ್ಲಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿದೆ.

ಕರ್ನಾಟಕ ಭೂ ಕಂದಾಯ ಕಾಯ್ದೆ-1964 ಮತ್ತು ಕರ್ನಾಟಕ ಭೂ ಕಬಳಿಕೆ ನಿಷೇಧ ಕಾಯ್ದೆ-2011ರ ಅಡಿಯಲ್ಲಿ ಈ ವಿಶೇಷ ತನಿಖಾ ತಂಡ ರಚಿಸಿ ಕಂದಾಯ ಇಲಾಖೆಯು ಜನವರಿ 28ರಂದು ಆದೇಶ ಹೊರಡಿಸಿದೆ.

ಭೂ ಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆಯ ಜಂಟಿ ನಿರ್ದೇಶಕ ನಿಸಾರ್ ಅಹಮ್ಮದ್, ಬೆಂಗಳೂರು ವಿಭಾಗದ ಹೆಚ್ಚುವರಿ ಪ್ರಾದೇಶಿಕ ಆಯುಕ್ತ ಇಸ್ಲಾವುದ್ದೀನ್ ಗದ್ಯಾಳ, ಕಂದಾಯ ಆಯುಕ್ತಾಲಯದ ತಹಶೀಲ್ದಾರ್ ಗಣಪತಿ ಶಾಸ್ತ್ರಿ ಅವರನ್ನು ಎಸ್‌ಐಟಿಯ ಸದಸ್ಯರನ್ನಾಗಿ ನೇಮಿಸಲಾಗಿದೆ. ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತರ ಕಚೇರಿಯ ಗ್ರೇಡ್-2 ತಹಶೀಲ್ದಾರ್ ಶೀತಲ್ ಅವರನ್ನು ಎಸ್‌ಐಟಿಯ ಸದಸ್ಯ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಲಾಗಿದೆ.


ಕುಮಾರಸ್ವಾಮಿ ಮತ್ತು ಅವರ ಕುಟುಂಬದವರು ಕೇತಗಾನಹಳ್ಳಿಯಲ್ಲಿ ಸರ್ಕಾರಿ ಜಮೀನುಗಳನ್ನು ಕಬಳಿಸಿದ್ದಾರೆ ಎಂದು ಆರೋಪಿಸಿ ಧಾರವಾಡದ ಸಮಾಜ ಪರಿವರ್ತನಾ ಸಮುದಾಯದ ಸಂಸ್ಥಾಪಕ ಎಸ್.ಆರ್. ಹಿರೇಮಠ ಅವರು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಆದೇಶ ಪಾಲಿಸಿಲ್ಲ ಎಂದು ರಾಜ್ಯ ಸರ್ಕಾರದ ವಿರುದ್ಧ ನ್ಯಾಯಾಂಗ ನಿಂದನೆ ಅರ್ಜಿಯನ್ನೂ ಸಲ್ಲಿಸಿದ್ದಾರೆ. ಈ ಅರ್ಜಿಯ ವಿಚಾರಣೆ ವೇಳೆ ಹೈಕೋರ್ಟ್, ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿತ್ತು. ಆ ಬೆನ್ನಲ್ಲೇ ಎಸ್‌ಐಟಿ ರಚಿಸಲಾಗಿದೆ. ಕೇತಗಾನಹಳ್ಳಿ ಗ್ರಾಮದ ಸರ್ವೆ ನಂಬರ್ 8, 9, 10, 16, 17 ಮತ್ತ 79ರಲ್ಲಿ ಮಂಜೂರಾತಿಯಾಗಿರುವ ಜಮೀನುಗಳ ಸಂಪೂರ್ಣ ದಾಖಲೆಗಳ ನೈಜತೆಯನ್ನು ಪರಿಶೀಲಿಸಬೇಕು. ದಾಖಲೆಗಳ ನೈಜತೆಯನ್ನು ಪರಿಶೀಲಿಸಲು ಅಗತ್ಯವಿದ್ದಲ್ಲಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೂ ಕಳಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

# ಮೈಕ್ರೋ ಫೈನಾನ್ಸ್ ಕಾಯ್ದೆ ಸ್ವಾಗತಾರ್ಹ: ಸದಾನಂದ ಗೌಡ

ಕುಣಿಗಲ್: ರಾಜ್ಯದಲ್ಲಿ ಬಡವರು, ಮಧ್ಯಮ ವರ್ಗದವರಿಗೆ ಸಾಲವನ್ನು ನೀಡಿರುವ ಮೈಕ್ರೋ ಫೈನಾನ್ಸ್ ರವರ ನಿರಂತರ ಕಿರುಕುಳದಿಂದಾಗಿ ಸಾಲಗಾರರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದರಿಂದ ಇಂತಹ ಲೂಟಿಕೋರರ ವಿರುದ್ಧವಾಗಿ ಸರ್ಕಾರ ತಡವಾದರೂ ಬಲಿಷ್ಠವಾದ ಕಾನೂನಿನ ಮೂಲಕ ಮೂಗುದಾರ ಹಾಕುವುದಕ್ಕೆ ಮುಂದಾಗಿರುವುದು ಒಳ್ಳೆಯ ಬೆಳವಣಿಗೆಯಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ ಹೇಳಿದ್ದಾರೆ.

ತುಮಕೂರು ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟಕ್ಕೆ ನಿರ್ದೇಶಕರಾಗಿ ಸತತ ಆರನೇ ಬಾರಿ ಬಿಜೆಪಿ ಮುಖಂಡ ಸಹಕಾರ ರತ್ನ ಡಿ.ಕೃಷ್ಣಕುಮಾರ್ ಆಯ್ಕೆ ಹೊಂದಿದ ಹಿನ್ನೆಲೆಯಲ್ಲಿ ಎಪಿಎಂಸಿ ಆವರಣದಲ್ಲಿ ಏರ್ಪಡಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಾ ರಾಜ್ಯದಲ್ಲಿ ಇತ್ತೀಚಿಗೆ ಬಡವರು ಹಿಂದುಳಿದವರು ಮಧ್ಯಮ ವರ್ಗದವರು ರೈತರ ಮೇಲೆ ಮೈಕ್ರೋ ಫೈನಾನ್ಸ್ ಎಂಬ ಮಹಾಮಾರಿ ಹಾವಳಿಯಿಂದ ತತ್ತರಿಸಿ ಆತ್ಮಹತ್ಯೆಗೆ ಶರಣಾಗುತ್ತಿದ್ದು ಇದನ್ನು ತಡೆಗಟ್ಟಲು ರಾಜ್ಯ ಸರ್ಕಾರ ಸುಗ್ರೀವಾಜ್ಞೆ ಮೂಲಕ ವಿಶೇಷ ಕಾನೂನು ತಿದ್ದುಪಡಿ ಮಾಡಲು ಹೊರಟಿರುವ ಕ್ರಮವು ತಡವಾದರೂ ಸ್ವಾಗತಾರ್ಹವಾಗಿದೆ, ಗ್ರಾಮೀಣ ಭಾಗದ ಜನರು ಆರ್ಥಿಕ ಸಬಲೀಕರಣ ಹೊಂದಲು ಹೈನುಗಾರಿಕೆ ನಮ್ಮ ದೇಶದಲ್ಲಿ ಕೈ ಹಿಡಿದಿದೆ ಆರ್ಥಿಕ ತಜ್ಞರ ಅಭಿಪ್ರಾಯದಂತೆ ನಮ್ಮ ದೇಶದ ಆರ್ಥಿಕತೆ ಸದೃಢವಾಗಲು ಹೈನುಗಾರಿಕೆಯಿಂದ ಸಾಧ್ಯವಾಗಿದೆ, ಗ್ರಾಮೀಣ ಭಾಗದಲ್ಲಿ ಹಾಲು ಉತ್ಪಾದಕರು ಆರ್ಥಿಕವಾಗಿ ಅದರಲ್ಲೂ ಮಹಿಳೆಯರು ವಿಶೇಷವಾಗಿ ಸ್ವಾವಲಂಬನೆ ಬದುಕನ್ನ ಕೈಗೊಂಡಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ ಕೇಂದ್ರ ಸರ್ಕಾರವು ಸಹಕಾರಿ ಕ್ಷೇತ್ರಕ್ಕೆ ಪ್ರತ್ಯೇಕ ಸಚಿವರನ್ನ ನೇಮಕ ಮಾಡಿ ಆರ್ಥಿಕವಾಗಿ ಸಬಲೀಕರಣ ವ್ಯವಸ್ಥೆ ಕೈಗೊಂಡಿರುವುದು ಒಂದು ಉತ್ತಮ ಬೆಳವಣಿಗೆಯಾಗಿದ್ದು ಜಗತ್ತಿನಲ್ಲಿ ಆರ್ಥಿಕ ಹಿನ್ನಡೆ ಉಂಟಾಗಿದ್ದರೂ ಸಹ ದೇಶದಲ್ಲಿ ಯಾವುದೇ ರೀತಿಯ ಆರ್ಥಿಕ ಹಿಂಜರಿಕೆ ಆಗಿಲ್ಲ, ತಂತ್ರಜ್ಞಾನ ಬೆಳವಣಿಗೆಯೊಂದಿಗೆ ದೇಶ ಮುನ್ನುಗ್ಗುತ್ತಿದ್ದು ಜನರ ಆಶೀರ್ವಾದ ಶಕ್ತಿಯಿಂದ ಸಬಲೀಕರಣವು ಸಾಧ್ಯವಾಗುತ್ತದೆ ಎಂದರು.

ಸತತ ಆರು ಬಾರಿ ಆಯ್ಕೆ ಹೊಂದುವುದರ ಮೂಲಕ ಡಿ.ಕೃಷ್ಣಕುಮಾರ್ ನಿರ್ದೇಶಕರಾಗಿ ತಾಲ್ಲೂಕಿನಹಾಲು ಒಕ್ಕೂಟದ ವ್ಯವಸ್ಥೆಗೆ ತನ್ನದೇ ಆದಂತಹ ಕೊಡುಗೆ ನೀಡಿದ್ದು ಮುಂದಿನ ದಿನಗಳಲ್ಲಿ ಇವರನ್ನು ರಾಜ್ಯ ವಿಧಾನಸಭೆಗೆ ಕಳಿಸುವಂತಹ ಕಾರ್ಯವನ್ನ ಕೈಗೊಳ್ಳಬೇಕಾಗಿದೆ, ಸಮಾಜದಲ್ಲಿ ಆರೋಗ್ಯ ಶಿಕ್ಷಣ ಕ್ಷೇತ್ರದಲ್ಲಿ ಮಹಿಳೆಯರ ಪಾತ್ರ ಪ್ರಮುಖ ಪಾತ್ರ ವಹಿಸಿದ್ದು ಉಳಿತಾಯದಿಂದ ಆರ್ಥಿಕ ಸಬಲೀಕರಣವು ಕೈಗೊಳ್ಳಲು ಮಹಿಳೆಯರು ಹೆಚ್ಚು ಹೆಚ್ಚು ಮುಂದೆ ಬರುತ್ತಿದ್ದಾರೆ, ಹೈನುಗಾರಿಕೆ ಕ್ಷೇತ್ರಕ್ಕೆ ಆರ್ಥಿಕ ಶಕ್ತಿ



ಇದ್ದು ರಾಜ್ಯ ಹಾಗೂ ಕೇಂದ್ರ ಸರ್ಕಾರವು ಈ ಹಾಲು ಒಕ್ಕೂಟದ ಮಹಿಳೆಯರಿಗೆ ಆತ್ಮಸ್ಥೈರ್ಯ ತುಂಬುವಂತಹ ಕೆಲಸವನ್ನ ಕೈಗೊಳ್ಳಬೇಕಾಗಿದೆ, ಹಳ್ಳಿಯಲ್ಲಿ ಮೈಕ್ರೋ ಫೈನಾನ್ಸ್ ವ್ಯವಸ್ಥೆಯಿಂದ ಜನಸಾಮಾನ್ಯರು ಬಡ್ಡಿ, ಚಕ್ರ ಬಡ್ಡಿ ಕಟ್ಟಲಾರದೆ ಸಾಲದ ಶೂಲೆಯಿಂದ ತತ್ತರಿಸಿ ಆತ್ಮಹತ್ಯೆಗೆ ಶರಣಾಗುತ್ತಿದ್ದು ರಾಜ್ಯ ಸರ್ಕಾರವು ಮೈಕ್ರೋ ಫೈನಾನ್ಸ್ ಕಾಯ್ದೆಗೆ ತಿದ್ದುಪಡಿ ತರಲು ಹೊರಟಿರುವುದು ಎಷ್ಟೋ ಬಡ ಕುಟುಂಬಗಳ ಉಳಿವಿಗೆ ಕಾರಣವಾಗಿದೆ ಎಂದು ಶ್ಲಾಘಿಸಿದರು.

ಅಭಿನಂದನೆ ಸನ್ಮಾನ ಸ್ವೀಕರಿಸಿ ಮಾತನಾಡಿದ ಡಿ.ಕೃಷ್ಣಕುಮಾರ್ತಾಲ್ಲೂಕಿನ ಅಭಿವೃದ್ಧಿ ನಿರಾಶದಾಯಕವಾಗಿದ್ದು ಶಾಸಕರ ನಿರ್ಲಕ್ಷತೆ ಇದಕ್ಕೆ ಕಾರಣವಾಗಿದೆ, ಹಾಲು ಒಕ್ಕೂಟದ ಚುನಾವಣೆ ನಂತರ ನಂತರ ಫಲಿತಾಂಶ ವಿಳಂಬವಾಗಲು ಅಧಿಕಾರಿಗಳ ಮೂಲಕ ಕಾನೂನು ಸಮರ ನಡೆಸಿಕುತಂತ್ರ ರಾಜಕೀಯ ನಡೆಸಿದರು, ಆದರೆ ನ್ಯಾಯಕ್ಕೆ ಜಯ ಸಿಕ್ಕಿದೆ, ತಾಲೂಕಿನ ಹಾಲು ಉತ್ಪಾದಕರ ಸೇವೆ ಮಾಡಲು ಅವಕಾಶ ಮಾಡಿದ ಎಲ್ಲಾ ಪ್ರತಿನಿಧಿಗಳನ್ನು ಸ್ಮರಿಸಿ ಇನ್ನು ಹೆಚ್ಚಿನ ರೀತಿಯಲ್ಲಿಸೇವೆ ಮಾಡಲು ಅವಕಾಶ ದೊರಕಿಸಿ ಕೊಟ್ಟವರಿಗೆ ಕೃತಜ್ಞತೆ ಸಲ್ಲಿಸಿದರು.

ಸಮಾರಂಭದಲ್ಲಿ ಮಾಜಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ವೈ.ಎಚ್.ಹುಚ್ಚಯ್ಯ,ಜಿಲ್ಲಾ ಡಿ.ಸಿ.ಸಿ.ಬ್ಯಾಂಕ್ ನಿರ್ದೇಶಕರಾದ ಬಿ.ಶಿವಣ್ಣ,ಜಿಲ್ಲಾ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀನಿವಾಸನ್,ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕರಾದ ಶಿರಾ ನಿರ್ದೇಶಕ ಎಸ್.ಆರ್.ಗೌಡ,ಶಿವಪ್ರಕಾಶ್,ಚಿಕ್ಕನಾಯಕನಹಳ್ಳಿ ಸಿದ್ದಗಂಗಯ್ಯ,ಕೊರಟಗೆರೆ ಮಂಜುನಾಥ್,ಡೈರಿ ವ್ಯವಸ್ಥಾಪಕ ಗಿರೀಶ್, ಬಿ.ಎಸ್. ಕುಮಾರ್, ಮಾಜಿ ತಾ.ಪಂ. ಸದಸ್ಯ ಬಲರಾಮ್, ಕೊಡಿಗೆಹಳ್ಳಿ ದಿನೇಶ್,ಬುಲೆಟ್ ಜಯರಾಮ್,ಬೆಸ್ಕಾಂ ನಿವೃತ್ತ ಅಧಿಕಾರಿ ಶ್ರೀನಿವಾಸ ಗೌಡ, ರಾಮಚಂದ್ರಯ್ಯ, ವಕೀಲ ನಾರಾಯಣಗೌಡ, ದಿಲೀಪ್ ಗೌಡ, ಹರೀಶ್ ನಾಯಕ್,ಗ್ರಾಮ ಪಂಚಾಯಿತಿ ಅಧ್ಯಕ್ಷ ರವಿ,ಕೆ.ಹೆಚ್. ಹಳ್ಳಿ ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷ ವೆಂಕಟೇಶ್ ಸೇರಿದಂತೆ ಬಿಜೆಪಿ ಹಾಗೂ ಜೆಡಿಎಸ್ ಮುಖಂಡರು, ಹಾಲು ಒಕ್ಕೂಟದ ಅಧ್ಯಕ್ಷರು ಕಾರ್ಯದರ್ಶಿಗಳು, ಸದಸ್ಯರು, ಮತ್ತಿತರರು ಉಪಸ್ಥಿತರಿದ್ದರು.

# ನಿವೃತ್ತ ನೌಕರರ ವೇದಿಕೆ ಶಿಕ್ಷಕರ ಪ್ರತಿಭಟನೆ

ಹನೂರು: ಪಟ್ಟಣದ ತಹಶೀಲ್ದಾರ್ ಕಚೇರಿ ಮುಂದೆ ನಿವೃತ್ತ ಶಿಕ್ಷಕರು ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಕರ್ನಾಟಕ ನಿವೃತ್ತ ನೌಕರರ ವೇದಿಕೆ ಹನೂರು ತಾಲೂಕು ಘಟಕದ ವತಿಯಿಂದ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಧರಣಿ ನಡೆಸಿದರು. ಪಟ್ಟಣದ ತಹಶೀಲ್ದಾರ್ ಕಚೇರಿ ಮುಂಭಾಗ ಜಮಾಯಿಸಿದ ನಿವೃತ್ತ ಶಿಕ್ಷಕರು ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿ. ನಂತರ ಹನೂರು ತಾಲೂಕು ತಹಶೀಲ್ದಾರ್ ಕಚೇರಿ ಶಿರಸ್ತೇದಾರ್ ನಾಗೇಂದ್ರ ಅವರಿಗೆ ಮನವಿ ಪತ್ರವನ್ನು ಸಲ್ಲಿಸಿದರು.



ದಿನಾಂಕ 01-07-2022 ರಿಂದ 31-7-2024 ರ ಅವಧಿಯಲ್ಲಿ ನಿವೃತ್ತಿಯಾದ ಶಿಕ್ಷಕರಿಗೆ ಕರ್ನಾಟಕ ಸರಕಾರದ ಮಾನ್ಯ ಮುಖ್ಯಮಂತ್ರಿಗಳು 7ನೇ ವೇತನ ಆಯೋಗದ ಲೆಕ್ಕಾಚಾರದ ಅನುಸಾರ ಡಿ.ಸಿ.ಆರ್.ಜಿ. ಕಮ್ಯುಟೇಶನ್, ಗಳಿಕೆ ರಜೆ ನಗದೀಕರಣಗಳ ನಿವೃತ್ತಿ ಆರ್ಥಿಕ ಸೌಲಭ್ಯವನ್ನು ನೀಡಬೇಕೆಂದು ಆಗ್ರಹಿಸಿದರು. ಈ ಅವಧಿಯಲ್ಲಿ ನಿವೃತ್ತಿಯಾದ ನೌಕರರಾದ ನಮಗೆ 6ನೇ ವೇತನ ಆಯೋಗದ ಲೆಕ್ಕಾಚಾರದ ಅನುಸಾರ ಡಿ.ಸಿ.ಆರ್.ಜಿ. ಕಮ್ಯುಟೇಶನ್, ಗಳಿಕೆ ರಜೆ ನಗದೀಕರಣಗಳ ನಿವೃತ್ತಿ ಆರ್ಥಿಕ ಸೌಲಭ್ಯವನ್ನು ನೀಡಿದ್ದಾರೆ, ಈ ನಿಟ್ಟಿನಲ್ಲಿ ನಮಗೆ ಅನ್ಯಾಯವಾಗಿದೆ, ಸರ್ಕಾರ ನಿವೃತ್ತ ನೌಕರರ ಸಮಸ್ಯೆಗಳು ಬಗ್ಗೆ ನಮ್ಮ ಬೇಡಿಕೆ ಪರಿಗಣಿಸಿ ಗಮನ ಹರಿಸದೇ ನಿರ್ಲಕ್ಷಿಸಿದ್ದಾರೆ, ಈಗಾಗಲೇ ರಾಜ್ಯದ ಎಲ್ಲಾ ಜಿಲ್ಲಾ ಉಸ್ತುವಾರಿ ಸಚಿವರುಗಳ, ಎಲ್ಲ ಕ್ಷೇತ್ರಗಳ ಶಾಸಕರ, ಎಲ್ಲಾ ಜಿಲ್ಲಾಧಿಕಾರಿಗಳ ಹಾಗೂ ಎಲ್ಲಾ ತಹಶೀಲ್ದಾರರುಗಳ ಮುಖಾಂತರ ಸರ್ಕಾರಕ್ಕೆ ಮನವಿಯನ್ನು ಅರ್ಪಿಸಿದ್ದೇವೆ. ಅಲ್ಲದೇ 18-9-2024 ರಂದು ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಸರಿಸುಮಾರು 12 ಸಾವಿರ ನಿವೃತ್ತ ನೌಕರರ ರಾಜ್ಯ ಮಟ್ಟದ ಬೃಹತ್ ಪ್ರತಿಭಟನಾ ಸಮಾವೇಶವನ್ನು ನಡೆಸಿ ನಮಗೆ ಆಗಿರುವ ಅನ್ಯಾಯದ ಕುರಿತು ರಾಜ್ಯದ ಮುಖ್ಯಮಂತ್ರಿಗಳಿಗೆ, ಉಪ ಮುಖ್ಯಮಂತ್ರಿಗಳಿಗೆ, ಸಂಘಟನೆಗಳ ರಾಜ್ಯಾಧ್ಯಕ್ಷರುಗಳಿಗೆ ಮನವಿ ಸಮರ್ಪಿಸಿದ್ದೇವೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ದಿನಾಂಕ 16-12-2024 ರಂದು ಬೆಳಗಾವಿಯ ಚಳಿಗಾಲದ ಅಧಿವೇಶನದ ಸಂದರ್ಭದಲ್ಲಿ ಸುವರ್ಣ ವಿಧಾನಸೌಧದ ಮುಂದೆ ರಾಜ್ಯದ ಎಲ್ಲ ಜಿಲ್ಲೆಗಳಿಂದ 20,000 ಕ್ಕೂ ಅಧಿಕ ನೌಕರರು ಸಮಾವೇಶಗೊಂಡು ನಮ್ಮ ಬೇಡಿಕೆ ಈಡೇರಿಕೆಗಾಗಿ ಬೃಹತ್ ಧರಣಿ ಮಾಡಿದ್ದೆವು, ಆ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಈ ಚಳಿಗಾಲದ ಅಧಿವೇಶನದ ನಂತರ ಬೆಂಗಳೂರಿನಲ್ಲಿ ಸಭೆ ಕರೆದು ನಿಮ್ಮ ಅಹವಾಲಿನ ಬಗ್ಗೆ ಚರ್ಚಿಸಿ ತೀರ್ಮಾನಿಸೋಣ ಎಂದಿದ್ದರು, ಆದರೆ ಇಲ್ಲಿಯವರೆಗೂ ಮುಖ್ಯಮಂತ್ರಿಗಳು ಸಭೆ ಏರ್ಪಾಡು ಮಾಡಿ ನಮ್ಮ ಅಹವಾಲು ಆಲಿಸಿರುವುದಿಲ್ಲ, ಈ ನಿಟ್ಟಿನಲ್ಲಿ ನಮಗೆ 7ನೇ ವೇತನ ಆಯೋಗದಲ್ಲಿ ಆಗಿರುವ ಅನ್ಯಾಯಕ್ಕೆ ಪರಿಹಾರ ಒದಗಿಸಬೇಕು, ಈ ದಿಸೆಯಲ್ಲಿ ಘನ ಸರಕಾರವಾಗಲಿ, ಮುಖ್ಯಮಂತ್ರಿಗಳಾಗಲಿ ನಮ್ಮ ಬೇಡಿಕೆ ಪರಿಗಣಿಸಿ ಈಡೇರಿಸುವತ್ತ ಗಮನ ಹರಿಸದೇ ನಿರ್ಲಕ್ಷಿಸಿದ್ದಾರೆ ಎಂದು ಮನವಿಯಲ್ಲಿ ಹೇಳಲಾಗಿದೆ.

ಈ ಸಂದರ್ಭದಲ್ಲಿ ಕರ್ನಾಟಕ ನಿವೃತ್ತ ನೌಕರರ ವೇದಿಕೆ ಜಿಲ್ಲಾ ಸಂಚಾಲಕರಾದ ರಾಜಮ್ಮ, ಚಿನ್ನಮ್ಮ, ಅಮಲ ದಾಸ್, ನಂಜಯ್ಯ, ಚಿನ್ನಮ್ಮ, ಮಂಗಲ ಮರಯ್ಯ, ಶಿವು, ರಾಣಿ, ನಿರ್ಮಲ ಸೇರಿದಂತೆ ಇನ್ನಿತರ ನಿವೃತ್ತ ಶಿಕ್ಷಕರು ಹಾಜರಿದ್ದರು.

# ತುಮ್ಮನಹಳ್ಳಿ ಗ್ರಾ.ಪಂ.ಅಧ್ಯಕ್ಷರ ಅವಿರೋಧ ಆಯ್ಕೆ

**ಶಿಡ್ಲಘಟ್ಟ:** ತುಮ್ಮನಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷೆಯಾಗಿ ಸುಶೀಲಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಗ್ರಾಮ ಪಂಚಾಯಿತಿಯ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಸಾಮಾನ್ಯ ಮಹಿಳೆಯರಿಗೆ ಮೀಸಲಾಗಿರುವ ಈ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿತ ಸುಶೀಲಮ್ಮ ಮಾತ್ರ ನಾಮಪತ್ರ ಸಲ್ಲಿಸಿದ್ದರು. ಬೇರೆ ಯಾವುದೇ ಅಭ್ಯರ್ಥಿಗಳು ಸ್ಪರ್ಧಿಸದ ಕಾರಣ, ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಜಗದೀಶ್ ಘೋಷಿಸಿದರು. ಸಹಾಯಕರಾಗಿ ಪಿಡಿಒ ಕಾರ್ಯ ನಿರ್ವಹಿಸಿದರು.

ನೂತನ ಅಧ್ಯಕ್ಷರಾದ ಸುಶೀಲಮ್ಮ ನಾಗರಾಜ್ ಮಾತನಾಡಿ ಎಲ್ಲಾ ಸದಸ್ಯರ ಒಮ್ಮತ ಸಹಕಾರದಿಂದ ಗ್ರಾಮ ಪಂಚಾಯತಿ ಅಭಿವೃದ್ಧಿಗೆ ಶ್ರಮಿಸುತ್ತೇವೆ, ಪಂಚಾಯತಿ ಮಟ್ಟದ ಮೂಲಭೂತ ಸೌಕರ್ಯಗಳಾದ ನೀರು, ಸ್ವಚ್ಛತೆ, ಬೀದಿ ದೀಪ ಹಾಗು ನೈರ್ಮಲ್ಯವನ್ನು ಕಾಪಾಡುವುದರೊಂದಿಗೆ ಸಾರ್ವಜನಿಕರ ಕೆಲಸಗಳನ್ನು ಮಾಡುವೆ




ಎಂದರು.

ಈ ಸಂದರ್ಭದಲ್ಲಿ ಕೆ.ಎಂ.ಎಫ್.ನಿರ್ದೇಶಕರಾದ ಆರ್. ಶ್ರೀನಿವಾಸ್ ರಾಮಯ್ಯ, ಗ್ರಾ.ಪಂ. ಮಾಜಿ ಅಧ್ಯಕ್ಷೆ ಪ್ರೇಮಾ ರಮೇಶ್, ಉಪಾಧ್ಯಕ್ಷ ಚಿಂತಡಪಿ ಮಾರುತಿ, ಸದಸ್ಯರಾದ ಟಿ.ಮಂಜುನಾಥ್, ಎಂ.ದೇವರಾಜ್, ಆರ್.ನಂಜಪ್ಪ, ನರಸಿಂಹಪ್ಪ, ಧನಲಕ್ಷ್ಮಮ್ಮ, ಅನುಸೂಯಮ್ಮ, ಲಕ್ಷ್ಮಿದೇವಮ್ಮ, ಲಕ್ಷ್ಮಿ ದೇವಮ್ಮ, ಮುಖಂಡರಾದ ಮಂಜುನಾಥ್, ಎಸ್.ಎಂ.ದಾಸ್, ಲಕ್ಷ್ಮೀನಾರಾಯಣ್, ವೇಧಮೂರ್ತಿ, ರವಿಚಂದ್ರ ಮುಂತಾದವರು ಹಾಜರಿದ್ದರು.

# ದಲಿತ ಸಂಘರ್ಷ ಸಮಿತಿ ಧರಣಿ ಅಂತ್ಯ

**ಶಿಡ್ಲಘಟ್ಟ:** ದಲಿತರ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು, ಬಗರ್ ಹುಕುಂ ಸಾಗುವಳಿಯಲ್ಲಿ ಕೃಷಿ ಜಮೀನು ಹಾಗೂ ವಸತಿ ಯೋಜನೆಯಡಿ ಮನೆ ಮಂಜೂರು ಮಾಡಬೇಕು, ದಲಿತರ ಮೇಲಿನ ದೌರ್ಜನ್ಯ ತಡೆಗಟ್ಟಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂಬ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ದಲಿತ ಸಂಘರ್ಷ ಸಮಿತಿ (ದಸಂಸ) ನಗರದ ತಾಲ್ಲೂಕು ಕಚೇರಿ ಮುಂಭಾಗ ಹನ್ನೊಂದು ದಿನಗಳಿಂದ ನಡೆಸುತ್ತಿದ್ದ ಧರಣಿಯನ್ನು ಜಿಲ್ಲಾಧಿಕಾರಿಗಳ ಭರವಸೆ ಮೇರೆಗೆ ಅಂತ್ಯಗೊಳಿಸಲಾಗಿದೆ.

"ಬದುಕುತ್ತಿದ್ದಾಗ ಕೃಷಿ ಭೂಮಿ ಮತ್ತು ಮನೆ, ಸತ್ತ ಬಳಿಕ ಅಂತ್ಯಸಂಸ್ಕಾರಕ್ಕಾಗಿ ಸ್ಮಶಾನ ಜಾಗ" ಎಂಬ ಘೋಷವಾಕ್ಯದೊಂದಿಗೆ ನಗರದ ತಾಲ್ಲೂಕು ಕಚೇರಿ ಎದುರು ಜನವರಿ 20 ರಿಂದ ಧರಣಿ ನಡೆಯುತ್ತಿತ್ತು. ದಲಿತರ ಬಡಾವಣೆಗಳಲ್ಲಿ ಕುಡಿಯುವ ನೀರು, ಚರಂಡಿ, ರಸ್ತೆ, ಬೀದಿ ದೀಪ, ಹಾಗೂ ಸ್ವಚ್ಛತೆ ಯಂತಹ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು ಎಂಬ ಒತ್ತಾಯ ಇತ್ತು. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಡೆದ



ಸಭೆಯಲ್ಲಿ ನೀಡಿದ ಭರವಸೆಗಳ ಹಿನ್ನೆಲೆಯಲ್ಲಿ, ದಸಂಸ ಸಂಘಟನೆಯ ಮುಖಂಡರು ತಹಸೀಲ್ದಾರರಿಗೆ ಮನವಿ ಸಲ್ಲಿಸಿದ ನಂತರ ಧರಣಿಯನ್ನು ಅಂತ್ಯಗೊಳಿಸಲಾಯಿತು.

ತಹಸೀಲ್ದಾರ್ ಬಿ.ಎನ್.ಸ್ವಾಮಿ ಮನವಿ ಸ್ವೀಕರಿಸಿ ಮಾತನಾಡಿ ಧರಣಿ ನಿರತರ ಬೇಡಿಕೆಗಳನ್ನು ಆದ್ಯತೆ ನೀಡಿ ಬಗೆಹರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಸರ್ಕಾರ ಮತ್ತು ಜಿಲ್ಲಾ ಮಟ್ಟದಲ್ಲಿ ತೀರ್ಮಾನಗೊಳ್ಳಬೇಕಾದ ಬೇಡಿಕೆಗಳನ್ನು ಸಂಬಂಧಿಸಿದ ಇಲಾಖೆಗೆ ಕಳುಹಿಸಲಾಗುವುದು ಎಂದು ತಿಳಿಸಿದರು.

ಈ ವೇಳೆ ದಸಂಸ ತಾಲ್ಲೂಕು ಸಂಚಾಲಕ ಟಿ.ಎ. ಚಲಪತಿ, ತಾಲ್ಲೂಕು ಸಂಘಟನಾ ಸಂಚಾಲಕ ಲಕ್ಕೇನಹಳ್ಳಿ ವೆಂಕಟೇಶ್, ಈ.ತಿಮ್ಮಸಂದ್ರ ಗಂಗಾಧರ್, ಹುಜಗೂರು ವೆಂಕಟೇಶ, ತಾಲ್ಲೂಕು ಮಹಿಳಾ ಸಂಚಾಲಕಿ ಶಶಿಕಲಾ ನರಸಿಂಹರಾಜು, ದಲಿತ ಮುಖಂಡರಾದ ದ್ಯಾವಕೃಷ್ಣಪ್ಪ, ಹಲವಾರು ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು.

## ಯಶಸ್ವಿನಿ ಯೋಜನೆ ನೋಂದಣಿ ಸಮಯಾವಕಾಶಕ್ಕೆ ಒತ್ತಾಯ

**ಶಿಡ್ಲಘಟ್ಟ:** ಯಶಸ್ವಿನಿ ಯೋಜನೆಗೆ ಹೆಸರು ನೋಂದಾಯಿಸಲು ಫೆಬ್ರವರಿ ತಿಂಗಳ ಅಂತ್ಯದವರೆಗೂ ಸಮಯಾವಕಾಶ ನೀಡಬೇಕೆಂದು ಜೆಡಿಎಸ್ ಪಕ್ಷದ ಮುಖಂಡ ತಾದೂರು ರಘು ಒತ್ತಾಯ ಮಾಡಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗ್ರಾಮೀಣ ಭಾಗದಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಆಸ್ಪತ್ರೆಗಳಲ್ಲಿ ಮಾರಣಾಂತಿಕ ಕಾಯಿಲೆಗಳಿಗೆ ಚಿಕಿತ್ಸೆ ಪಡೆಯಲು ಯಶಸ್ವಿನಿ ಯೋಜನೆ ಬಹಳ ಉಪಕಾರಿ ಆಗಲಿದೆ, ಸಹಕಾರ ಸಂಘಗಳ ಹಾಗು ಸಹಕಾರ ಬ್ಯಾಂಕ್‌ನಲ್ಲಿನ ಷೇರುದಾರರು, ಸದಸ್ಯರು ಯಶಸ್ವಿನಿ ಯೋಜನೆಗೆ ಹೆಸರು ನೋಂದಾಯಿಸಿ ಯೋಜನೆಯ ಸವಲತ್ತು ಪಡೆಯಬಹುದು ಎಂದರು.

ಆದರೆ ಯಶಸ್ವಿನಿ ಯೋಜನೆಗೆ ಹೆಸರು ನೋಂದಾಯಿ ಸಲು ಜ.31 ರವರೆಗೆ ಮಾತ್ರ ಅವಕಾಶವಿದ್ದು, ಈ ಬಗ್ಗೆ ಸಾಕಷ್ಟು ಮಂದಿಗೆ ವಿಷಯ ಗೊತ್ತಿಲ್ಲ, ಸಮರ್ಪಕ ಮಾಹಿತಿ ಇಲ್ಲದ ಕಾರಣ ಸಾಕಷ್ಟು ಮಂದಿ ಯೋಜನೆಗೆ ಹೆಸರು ನೋಂದಾಯಿಸಲು ಸಾಧ್ಯವಾಗಿಲ್ಲ ಎಂದರು. ಹಾಲಿನ ಡೈರಿಗಳು ಸೇರಿದಂತೆ ಸಹಕಾರಿ ಸಂಘಗಳಲ್ಲಿ ಯಶಸ್ವಿನಿ ಯೋಜನೆ ಬಗ್ಗೆ ಸಾಷಕ್ಕು ಪ್ರಚಾರ ಮಾಡಿ, ಹೆಸರು ನೋಂದಾಯಿಸಲು ಅಂತಿಮ ದಿನ, ಕಟ್ಟಬೇಕಾದ ವಂತಿಗೆ ಮೊತ್ತದ ಬಗ್ಗೆ ಪ್ರಚಾರ ಮಾಡಬೇಕು ಮತ್ತು ಗಡುವು ವಿಸ್ತರಿಸಬೇಕೆಂದು ಅವರು ಮನವಿ ಮಾಡಿದರು.

## ಬ್ಯೂಟಿ ಪಾರ್ಲರ್ ಉಚಿತ ತರಬೇತಿಗೆ ಅರ್ಜಿ ಆಹ್ವಾನ

**ಚಾಮರಾಜನಗರ:** ಎಸ್.ಬಿ.ಐ ಗ್ರಾಮೀಣ ಸ್ವಉದ್ಯೋಗ ತರಬೇತಿ ಸಂಸ್ಥೆ ವತಿಯಿಂದ ಗ್ರಾಮೀಣ ಭಾಗದ ನಿರುದ್ಯೋಗಿ

ಯುವತಿಯರಿಗೆ ಊಟ-ವಸತಿಗಳೊಂದಿಗೆ ಉಚಿತವಾಗಿ ಮಹಿಳಾ ಬ್ಯೂಟಿ ಪಾರ್ಲರ್ ತರಬೇತಿ ನೀಡಲಿದ್ದು ಆಸಕ್ತರು ನೇರವಾಗಿ ಕಚೇರಿಯನ್ನು ಸಂಪರ್ಕಿಸಬಹುದು. ಫೆಬ್ರವರಿ 3 ರಿಂದ ತರಬೇತಿ ಪ್ರಾರಂಭಿಸುತ್ತಿದ್ದು, 18 ರಿಂದ 45 ವರ್ಷದೊಳಗಿನ ಮಹಿಳಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ಆಧಾರ್ ಕಾರ್ಡ್, ಪಡಿತರ ಚೀಟಿ ನಕಲು ಪ್ರತಿ ಮತ್ತು 4 ಭಾವಚಿತ್ರಗಳನ್ನು ತರಬೇಕು, ತರಬೇತಿಯನ್ನು ಮಾದಾಪುರದ ಸಂತೇಮರಳ್ಳಿ ರಸ್ತೆಯ ಪೆಟ್ರೋಲ್ ಬಂಕ್ ಎದುರಿನ ಸಮಾಜ ಕಲ್ಯಾಣ ಇಲಾಖೆಯ ಹಾಸ್ಟಲ್ ಕಟ್ಟಡದ ಎಸ್.ಬಿ.ಐ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆಯಲ್ಲಿ ನೀಡಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಮೊ.ಸಂ 9606098878, 8722483393, 9739067155ಸಂಪರ್ಕಿಸುವಂತೆ ಎಸ್.ಬಿ.ಐ ಗ್ರಾಮೀಣ ಸ್ವಉದ್ಯೋಗ ತರಬೇತಿ ಸಂಸ್ಥೆಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜನತಾ ಕಾಲೋನಿ, ಎಂ.ಪಿ.ನಗರ ಅಭಿವೃದ್ಧಿಗೆ ಜಿಲ್ಲಾಧಿಕಾರಿಗೆ ಮನವಿ

**ಹನೂರು:** ಶ್ರೀ ಮಲೈಮಹದೇಶ್ವರ ಬೆಟ್ಟ ಗ್ರಾಮ ಪಂಚಾಯತ್ ಜನತಾ ಕಾಲೋನಿ, ಎಂ.ಪಿ. ನಗರದಲ್ಲಿನ ಸಮಸ್ಯೆಗಳು, ಅಭಿವೃದ್ಧಿ ಕೆಲಸಗಳ ಕುರಿತು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರಿಗೆ ಬಾಬಾ ಸಾಹೇಬ್ ಡಾ॥ ಬಿ.ಆರ್. ಅಂಬೇಡ್ಕರ್ ಯುವಕರ ಸಂಘಟನೆ ಮನವಿ ಪತ್ರ ಸಲ್ಲಿಸಿದೆ. ಸಂಘದ ಪದಾಧಿಕಾರಿಗಳು ಚಾಮರಾಜನಗರ ಜಿಲ್ಲಾಡಳಿತ ಕಛೇರಿಯಲ್ಲಿ ಮನವಿ ಸಲ್ಲಿಸಿದರು.

ಜನತಾ ಕಾಲೋನಿ, ಎಂ.ಪಿ ನಗರ ಕಾಲೋನಿಯಲ್ಲಿ ಕಾಂಕ್ರಿಟ್ ರಸ್ತೆ, ಮತ್ತು ಅಭಿವೃದ್ಧಿ ಪಡಿಸುವುದು ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಭವನವನ್ನು ಮೇಲ್ದರ್ಜೆ ಏರಿಸಬೇಕು, ಇಲ್ಲಿ 5ನೇ ತರಗತಿ ವರೆಗೆ ಸರ್ಕಾರಿ ಶಾಲೆ ಇದ್ದು, ಅದನ್ನು 10ನೇ ತರಗತಿವರೆಗೆ ವಿಸ್ತರಿಸಬೇಕು, ಮಹದೇಶ್ವರ ಬೆಟ್ಟದಲ್ಲಿ ನಡೆಯುವ ಸಚಿವ ಸಂಪುಟದ ಸಭೆಯಲ್ಲಿ ಈ ವಿಷಯವನ್ನು ಮಂಡಿಸಿ ಕಾಲೋನಿಗೆ ಬೇಕಾದ ಮೂಲಭೂತ ಸೌಕರ್ಯ ಅಭಿವೃದ್ಧಿ ಕೆಲಸವನ್ನು ಮಾಡಿಸಿ ಕೊಡಬೇಕು, ಮಲೈ ಮಹದೇಶ್ವರ ವೀರಶೈವ ಬೆಟ್ಟದ ಜನತಾ ಕಾಲೋನಿ, ಮತ್ತು ಎಂ.ಪಿ.ನಗರ, ಹೊಸ ಬಡಾವಣೆಯಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಆದಿಕರ್ನಾಟಕ ಜನಾಂಗದವರು 200 ಮನೆಗಳಿದ್ದು ಇಲ್ಲಿ ಕೆಲವು ಬೀದಿಗಳಲ್ಲಿ ಕಾಂಕ್ರಿಟ್ ರಸ್ತೆ ಮಾಡಿಸಿದ್ದು, ಇನ್ನು ಅರ್ಧಭಾಗದಲ್ಲಿ ಕಾಂಕ್ರಿಟ್ ರಸ್ತೆ ನಿರ್ಮಿಸಬೇಕಾಗಿರುವುದರಿಂದ ಅದಕ್ಕೆ ಸರ್ಕಾರದಿಂದ ಅನುದಾನ ಬಿಡುಗಡೆ



ಮಾಡಿಸಬೇಕು, ಇಲ್ಲಿ ಅಂಗನವಾಡಿ ಕೇಂದ್ರ, ಶಾಲೆ ಇದೆ. ಇಲ್ಲಿ ಕಾಡು ಹಂದಿಗಳು ಶಾಲೆಯ ಹತ್ತಿರ ಬರುವುದರಿಂದ ಮಕ್ಕಳು ಶಾಲೆಯಿಂದ ಹೊರಗೆ ಬರುವುದಕ್ಕೆ ಹೆದರುತ್ತಾರ, ಆದ್ದರಿಂದ ಶಾಲೆ ಸುತ್ತಲು ಕಾಂಪೌಂಡ್ ನಿರ್ಮಿಸಿಕೊಡಬೇಕು ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಎಂ.ಪಿ.ನಗರ ಹೊಸಬಡಾವಣೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ರವರ ಸಮುದಾಯ ಭವನ 20 ಲಕ್ಷ ನಿರ್ಮಾಣ ಹಂತದಲ್ಲಿದ್ದು, ಅದು ಚಿಕ್ಕದಾಗಿರುವುದರಿಂದ ಸಭೆ ಸಮಾರಂಭ ಮಾಡಲು ತುಂಬಾ ತೊಂದರೆಯಾಗಿರುವುದರಿಂದ ಹಾಗೂ ಅಡುಗೆ ಮನೆ ನಿರ್ಮಿಸಲು ಇನ್ನು ಹೆಚ್ಚಿನ ಅನುದಾನ ಬಿಡುಗಡೆ ಮಾಡಿಸಿಕೊಡಬೇಕು, ಪರಿಶಿಷ್ಟ ಜನಾಂಗದವರಿಗೆ ಸ್ಮಶಾನ ಮಂಜೂರು ಮಾಡಿದ್ದು ಅದು ತುಂಬಾ ಇಳಿಜಾರು ಗುಡ್ಡಗಳಿಂದ ಕೂಡಿದ್ದು, ಹಾಗೂ ಗಿಡಮರಗಳು ಬೆಳೆದಿರುವುದರಿಂದ ಅಲ್ಲಿ ಮರಣ ಹೊಂದಿರುವವರನ್ನು ಮಣ್ಣು ಮಾಡಲು ಹರಸಾಹಸ ಮಾಡಬೇಕಾಗಿರುತ್ತದೆ, ಆದ್ದರಿಂದ ಸ್ಮಶಾನದಲ್ಲಿರುವ ಗಿಡ್ಡ ಮರಗಳನ್ನು ತೆಗೆದು ಹಾಕಿಸಿ ಸ್ಮಶಾನವನ್ನು ಸಮತಟ್ಟು ಮಾಡಿ ಸುತ್ತಲು ಬೇಲಿ ಹಾಕಿಸಿ ಕೊಡಬೇಕೆಂದು ಎಂದು ಮನವಿಯಲ್ಲಿ ಕೇಳಿಕೊಳ್ಳಲಾಗಿದೆ.

ಈ ಸಂದರ್ಭದಲ್ಲಿ ಛಲವಾದಿ ಮಹಾಸಭಾ ರಾಜ್ಯ ಉಪಾಧ್ಯಕ್ಷ ಬಸವರಾಜು, ಮಲೈ ಮಹದೇಶ್ವರ ಬೆಟ್ಟದ ಜನತಾ ಕಾಲೋನಿ ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಯುವಕರ ಸಂಘದ ಎನ್.ವಿಜಯ್ ಕುಮಾರ್, ದಲಿತ ಸಂಘರ್ಷ ಸಮಿತಿ ಸಂಚಾಲಕ ದೊರೆಸ್ವಾಮಿ (ಜಾನಿ), ಗೋಪಾಲ, ಚಂದ್ರು ಇದ್ದರು.

# ಕುರಂಕೋಟೆಗೆ ಸಚಿವರ ಭೇಟಿ ಕಡತಗಳ ಪರಿಶೀಲನೆ

**ಕೊರಟಗೆರೆ:** ಕುರಂಕೋಟೆ ಗ್ರಾ.ಪಂ.ಗೆ ಗೃಹಸಚಿವ ಡಾ.ಜಿ.ಪರಮೇಶ್ವರ ಭೇಟಿ ನೀಡಿ ಅಭಿವೃದ್ದಿ ಮತ್ತು ಅನುದಾನದ ಕಡತಗಳನ್ನು ಪರಿಶೀಲನೆ ನಡೆಸಿದರು.

ನರೇಗಾ ಯೋಜನೆಯಡಿ ಕಾಮಗಾರಿಯ ವಿಳಂಬದ ಬಗ್ಗೆ ಗ್ರಾ.ಪಂ. ಸದಸ್ಯರು ದೂರಿದರು. ನಂತರ ಜಿ.ಪಂ. ಸಿಇಓ ಡಾ.ಪ್ರಭು ಕುರಂಕೋಟೆ ಗ್ರಾಪಂಯ ಎಲ್ಲಾ ಸರಕಾರಿ ಶಾಲೆಗಳ ಕೌಪೌಂಡು ಕಾಮಗಾರಿ ಮುಕ್ತಾಯ ಆಗಿದೆ. ಇನ್ನೂಳಿದ ಕಾಮಗಾರಿಗಳನ್ನು ತ್ವರಿತವಾಗಿ ಮುಗಿಸುತ್ತೇವೆ ಎಂದು ಗೃಹ ಸಚಿವರಿಗೆ ಮಾಹಿತಿ ನೀಡಿದರು.



ಡಿಜಿಟಲ್ ಅಭಿಲೇಖಾಲಯ ಉದ್ಘಾಟನೆ: ಕಂದಾಯ ಇಲಾಖೆ ವ್ಯಾಪ್ತಿಯ 19ಲಕ್ಷ 25ಸಾವಿರ ಪುಟದ ನೂರಾರು ವರ್ಷಗಳ ಹಳೆಯ ಭೂದಾಖಲೆಗಳನ್ನು ಇತ್ತೀಚಿಗೆ ಸರಕಾರದ

ಆದೇಶದಂತೆ ಡಿಜಿಟಲೀಕರಣ ಮಾಡಲಾಗಿತ್ತು. ಕಂದಾಯ ಇಲಾಖೆಯಲ್ಲಿನ ರೀಜಿಸ್ಟರ್ ಸೇರಿ

22ಲಕ್ಷದ 50ಸಾವಿರ ನೂತನ ಭೂಸುರಕ್ಷಾ ಯೋಜನೆಯಡಿ ಡಿಜೀಟಲಿಕರಣ ಮಾಡಿರುವ ಅಭಿಲೇಖಾಲಯದ ನೂತನ ಕೊಠಡಿಯನ್ನು

ಗೃಹಸಚಿವ ಡಾ.ಜಿ.ಪರಮೇಶ್ವರ ಉದ್ಘಾಟಿಸಿ ಭೂದಾಖಲೆಗಳ ಡಿಜಿಟಲ್ ಗಣಕೀಕರಣಕ್ಕೆ ಚಾಲನೆ ನೀಡಿದರು.

## ಸರ್ಕಾರಿ ನೌಕರರ ಸಂಘ ಶಾಖೆಗೆ ಕಾರ್ಯಾಧ್ಯಕ್ಷರು, ಗೌ.ಅಧ್ಯಕ್ಷರ ನೇಮಕ

**ಚಾಮರಾಜನಗರ:** ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಚಾಮರಾಜನಗರ ಜಿಲ್ಲಾ ಶಾಖೆಯ 2024-29ನೇ ಅವಧಿಗೆ ಕಾರ್ಯಾಧ್ಯಕ್ಷರಾಗಿ ಶಿಕ್ಷಣ ಇಲಾಖೆಯ ಮಹದೇವಸ್ವಾಮಿರವರನ್ನು ಹಾಗೂ ಗೌರವ ಅಧ್ಯಕ್ಷರಾಗಿ ಪಂಚಾಯತ್ ರಾಜ್ ಇಲಾಖೆಯ ಎಸ್. ಮಹದೇವಯ್ಯರವರನ್ನು ನೇಮಕ ಮಾಡಲಾಗಿದೆ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಡಾ. ಸಿ.ಎನ್. ರೇಣುಕಾದೇವಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪೌರಕಾರ್ಮಿಕರ ಸೇವೆ ಅನನ್ಯ: ಶಾಸಕ ಸಿ.ಪುಟ್ಟರಂಗಶೆಟ್ಟಿ

**ಚಾಮರಾಜನಗರ:** ಮಳೆ, ಚಳಿ, ಬಿಸಿಲೆನ್ನದೇ ಹಗಲು-ರಾತ್ರಿ ಹಾಗೂ ತುರ್ತು ಸಂದರ್ಭಗಳಲ್ಲಿ ನಗರ ಸ್ವಚ್ಛತೆಯ ಕಾಯಕ ಮಾಡುವ ಪೌರಕಾರ್ಮಿಕರ ವೃತ್ತಿ ಅನನ್ಯ ಹಾಗೂ ಬಹಳ ಅಮೂಲ್ಯವಾಗಿದೆ ಎಂದು ಎಂ.ಎಸ್.ಐ.ಎಲ್ ಅಧ್ಯಕ್ಷರು ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಹೇಳಿದ್ದಾರೆ.

ನಗರದ ಶ್ರೀ ಮಹರ್ಷಿ ವಾಲ್ಮೀಕಿ ಭವನದ ಸಭಾಂಗಣದಲ್ಲಿಂದು ಪೌರಾಡಳಿತ ನಿರ್ದೇಶನಾಲಯ, ಜಿಲ್ಲಾಡಳಿತ, ಜಿಲ್ಲಾ ನಗರಾಭಿವೃದ್ಧಿ ಕೋಶ ಹಾಗೂ ನಗರಸಭೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಪೌರಕಾರ್ಮಿಕರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ನಮ್ಮ ಮನೆಯನ್ನು ನಾವೇ ಸ್ವಚ್ಛ ಮಾಡಿಕೊಳ್ಳುತ್ತೇವೆ, ಆದರೆ ಊರು, ನಗರಗಳ ಸ್ವಚ್ಛ ಮಾಡುವವರು ಪೌರಕಾರ್ಮಿಕರೇ ಆಗಿದ್ದಾರೆ, ಚಾಮರಾಜನಗರ ಜಿಲ್ಲೆ ಸ್ವಚ್ಛತೆ ಹಾಗೂ ಶುದ್ಧ ಗಾಳಿ ನೀಡುವಲ್ಲಿ ಮುಂದಿದೆ, ಇದಕ್ಕೆ ಮುಖ್ಯ ಕಾರಣರು ಪೌರಕಾರ್ಮಿಕರು, ಪೌರಕಾರ್ಮಿಕರ ಹುದ್ದೆಯನ್ನು ಲಘುವಾಗಿ ಪರಿಗಣಿಸಬಾರದು, ದಿನನಿತ್ಯದ ಕಾಯಕದ ಬಳಿಕ ಸ್ವಚ್ಛತೆಗೆ ಆದ್ಯತೆ ನೀಡಬೇಕು, ವಿಶ್ರಾಂತಿ ಪಡೆಯಬೇಕು, ಉತ್ತಮ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದರು, ಡಾ. ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಕಾರ್ಮಿಕರ ಶ್ರೇಯೋಭಿವೃದ್ಧಿಗಾಗಿ ಸಾಕಷ್ಟು ಕಾನೂನುಗಳನ್ನು ಅಡಕಗೊಳಿಸಿದ್ದಾರೆ, ಅದರನ್ವಯ ಸರ್ಕಾರಗಳು ಪೌರಕಾರ್ಮಿಕರಿಗೆ ವಸತಿ ಯೋಜನೆ, ಆರೋಗ್ಯ ಭಾಗ್ಯ, ಕನಿಷ್ಠ ವೇತನ ಸೌಲಭ್ಯ, ಪೌರಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿವೇತನ, ವಿದೇಶಿ ವ್ಯಾಸಂಗ ಯೋಜನೆ ಇನ್ನಿತರೆ ಯೋಜನೆಗಳನ್ನು ಜಾರಿಗೊಳಿಸಿವೆ, ಇಲಾಖೆಗಳಲ್ಲಿ ಶೇ.5ರಷ್ಟು ಅನುದಾನ ಪೌರಕಾರ್ಮಿಕರಿಗಾಗಿಯೇ ಮೀಸಲಿದೆ, ಅವುಗಳ ಸದ್ಬಳಕೆಯಾಗಬೇಕು, ಪೌರಕಾರ್ಮಿಕರಿಗೆ ಮನೆ ನೀಡುವ ಸಲುವಾಗಿ ಈಗಾಗಲೇ ನಿವೇಶನ ಮಂಜೂರು ಮಾಡಲಾಗಿದ್ದು, 40 ಎಕರೆ ಜಾಗದಲ್ಲಿ 800 ರಿಂದ 1 ಸಾವಿರ ನಿವೇಶನಗಳನ್ನು ನೀಡಲು ಜಿಲ್ಲಾಡಳಿತ ಕ್ರಮವಹಿಸಿದೆ ಎಂದು ಎಂದು ಶಾಸಕರು ತಿಳಿಸಿದರು.



ಚೂಡಾ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ ಮುನ್ನಾ ಅವರು ಮಾತನಾಡಿ ನಗರದ ಸ್ವಚ್ಛತಾ ಕಾಯಕದಲ್ಲಿ ತೊಡಗಿರುವ ಪೌರಕಾರ್ಮಿಕರ ಆರೋಗ್ಯದ ಬಗ್ಗೆ ಸರ್ಕಾರ ಕಾಳಜಿ ವಹಿಸಬೇಕು, ಕೋವಿಡ್ ಸಂದರ್ಭದಲ್ಲಿ ಪೌರಕಾರ್ಮಿಕರು ಅವಿರತವಾಗಿ ದುಡಿದಿದ್ದಾರೆ. ಪೌರಕಾರ್ಮಿಕರ ಅಭಿವೃದ್ಧಿಗಾಗಿ ಸರ್ಕಾರ ಹಲವು ಕಲ್ಯಾಣ ಯೋಜನೆಗಳನ್ನು ಜಾರಿಗೆ ತಂದಿದೆ, ಪೌರಕಾರ್ಮಿಕರು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು, ಸಮಾಜದ ಸತ್ಪ್ರಜೆಗಳನ್ನಾಗಿ ರೂಪಿಸಬೇಕು ಎಂದರು, ನಗರಸಭೆ ಉಪಾಧ್ಯಕ್ಷರಾದ ಮಮತ ಅವರು ಮಾತನಾಡಿ ಪೌರಕಾರ್ಮಿಕರು ನಿಯಮಿತವಾಗಿ ಸ್ವಚ್ಛತಾ ಕಾರ್ಯ ಮಾಡದಿದ್ದಾಗ ನಮ್ಮ ಬದುಕು ದುಸ್ತರವಾಗಲಿದೆ, ಹಾಗೆಯೇ ನಗರಗಳು ಅಶುಚಿತ್ವದಿಂದ ಕೂಡಿರಲಿವೆ, ನಿಜವಾದ ಕಾಯಕ ಯೋಗಿಗಳಾದ ಪೌರಕಾರ್ಮಿಕರು ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು ಎಂದು ತಿಳಿಸಿದರು, ನಗರಸಭೆ ಸದಸ್ಯರಾದ ಮಹೇಶ್, ಬಸವಣ್ಣ, ಕುಮುದಾ ಅವರುಗಳು ಮಾತನಾಡಿ ನಗರಗಳ ಸ್ವಚ್ಛತಾ ಕಾರ್ಯದಲ್ಲಿ ಪೌರಕಾರ್ಮಿಕರ ಪಾತ್ರ ಅಪಾರವಾಗಿದೆ, ಪೌರಕಾರ್ಮಿಕರ ಮಕ್ಕಳು ಪೌರಕಾರ್ಮಿಕರ ವೃತ್ತಿಯನ್ನೇ ಅನುಸರಿಸದೇ ಉತ್ತಮ, ಶಿಕ್ಷಣ ಪಡೆಯಬೇಕು. ಉನ್ನತ ಅಧಿಕಾರ ಪಡೆಯಬೇಕು, ಆಗಮಾತ್ರ ಪೌರಕಾರ್ಮಿಕರ ಬದುಕು ಸಾರ್ಥಕತೆ ಕಾಣಲಿದೆ ಎಂದು ಹೇಳಿದರು.

ನಗರಸಭೆ ಅಧ್ಯಕ್ಷರಾದ ಎಸ್. ಸುರೇಶ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ನಗರಸಭೆಯಿಂದ ಒದಗಿಸಲಾಗಿರುವ ಸೌಲಭ್ಯಗಳ ಕುರಿತು ವಿವರಿಸಿ ಪೌರಕಾರ್ಮಿಕರು ಸ್ವಚ್ಛತೆ ಜೊತೆಗೆ ಉತ್ತಮ ಆರೋಗ್ಯ ಹೊಂದಬೇಕು, ದುಶ್ಚಟಗಳಿಂದ ದೂರವಿರಬೇಕು, ಪೌರಕಾರ್ಮಿಕರು ಸಮಾಜದ ಮುಂಚೂಣಿಗೆ ಬರಬೇಕು ಎಂದರು. ಜಿಲ್ಲಾ ಕಾರ್ಮಿಕ ಅಧಿಕಾರಿ ಡಾ. ಎಂ. ಸವಿತ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಮುನಿರಾಜು ಅವರು ಪೌರಕಾರ್ಮಿಕರ ಕಲ್ಯಾಣಕ್ಕಾಗಿ ಸರ್ಕಾರ ಜಾರಿಗೊಳಿಸಿರುವ ವಿವಿಧ ಯೋಜನೆ, ಕಾರ್ಯಕ್ರಮಗಳು ಹಾಗೂ ದೊರೆಯುವ ಸೌಲಭ್ಯಗಳ ಬಗ್ಗೆ ಸುದೀರ್ಘವಾದ ಮಾಹಿತಿ ನೀಡಿದರು.

ಪೌರಕಾರ್ಮಿಕರಿಗಾಗಿ ನಡೆಸಲಾಗಿದ್ದ ಕ್ರೀಡಾಕೂಟದಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಪೌರಕಾರ್ಮಿಕರಾಗಿ ಉತ್ತಮ ಸೇವೆ ಸಲ್ಲಿಸಿದವರಿಗೆ ಹಾಗೂ ನಿವೃತ್ತರಾದ ಪೌರಕಾರ್ಮಿಕರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ನಗರಸಭೆ ಪೌರಾಯುಕ್ತರಾದ ಎಸ್.ವಿ. ರಾಮದಾಸ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಎಂ.ವಿ. ಸುಧಾ, ಕಾರ್ಯಪಾಲಕ ಅಭಿಯಂತರರಾದ ಅಲ್ತಾಫ್, ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಸುಬ್ರಾಯ, ನಗರಸಭೆ ನಾಮನಿರ್ದೇಶಿತ ಸದಸ್ಯರಾದ ಸ್ವಾಮಿ, ಸಿದ್ದರಾಜು, ಬಾಲಸುಬ್ರಮಣ್ಯಂ, ಇತರರು ಕಾರ್ಯಕ್ರಮದಲ್ಲಿ ಇದ್ದರು. ವೇದಿಕೆ ಕಾರ್ಯಕ್ರಮಕ್ಕೂ ಮೊದಲು ನಗರಸಭಾ ಕಾರ್ಯಾಲಯದ ಮುಂಭಾಗದಿಂದ ವಿವಿಧ ಆಕರ್ಷಕ ಕಲಾತಂಡಗಳೊಂದಿಗೆ ಏರ್ಪಡಿಸಲಾಗಿದ್ದ ಜಾಥಾಗೆ ಸಿ. ಪುಟ್ಟರಂಗಶೆಟ್ಟಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತ ಅವರು ಚಾಲನೆ ನೀಡಿದರು. ನಗರದ ಪ್ರಮುಖ ಬೀದಿಗಳಲ್ಲಿ ಸಾಗಿದ ಜಾಥಾ ವಾಲ್ಮೀಕಿ ಭವನದಲ್ಲಿ ಅಂತ್ಯಗೊಂಡಿತು.

## ಬಡವರ ಶೋಷಣೆ ಮಾಡಿದ್ರೆ ಸುಮ್ಮನೇ ಇರೋಲ್ಲ: ಪರಂ

ಕೊರಟಗೆರೆ: ಮೈಕ್ರೋ ಫೈನಾನ್ಸ್ ಕಂಪನಿಗಳು ಗೂಂಡಾಗಳ ಮೂಲಕ ಸಾಲ ವಸೂಲಾತಿ ನೇಪದಲ್ಲಿ ಬಡವರ ಮೇಲೆ ದಬ್ಬಾಳಿಕೆ ಅಥವಾ ಶೋಷಣೆ ಮಾಡಿದ್ರೇ ನಾನು ಮತ್ತು ನಮ್ಮ ಸರಕಾರ ಸುಮ್ಮನೇ ಕೋರೊದಿಲ್ಲ ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ ಖಡಕ್ ಎಚ್ಚರಿಕೆ ನೀಡಿದ್ದಾರೆ.

ಕೊರಟಗೆರೆ ತಾಲೂಕು ಚನ್ನರಾಯನದುರ್ಗ ಹೋಬಳಿಯ ಕುರಂಕೋಟೆ ಗ್ರಾಮಕ್ಕೆ ಭೇಟಿನೀಡಿ ಮಾರುತಿಯ ಕುಟುಂಬಸ್ಥರಿಗೆ ಧೈರ್ಯ ತುಂಬಿ 50ಸಾವಿರ ವೈಯಕ್ತಿಕ ಧನಸಹಾಯ ನೀಡಿ ಅವರು ಮಾತನಾಡಿದರು.



ರಾಜ್ಯದಲ್ಲಿ ಲಕ್ಷಾಂತರ ಜನರಿಗೆ ಅಧಿಕೃತ ಫೈನಾನ್ಸ್ ಕಂಪನಿಯವ್ರು 59ಸಾವಿರ ಕೋಟಿ ಸಾಲ ನೀಡಿದ್ದಾರೆ, ವಸೂಲಿ ಮಾಡುವಾಗ ಗೂಂಡಗಳನ್ನು ಕಳಿಸೋದು, ಮನೆಗೆ ಬೀಗ ಹಾಕಿ ಬೈಯೋದು, ನಾಮಫಲಕ ಹಾಕೋದು ಮತ್ತು ಹೊಡೆಯೋದು ನಮ್ಮ ಸರಕಾರದ ಗಮನಕ್ಕೆ ಬಂದಿದೆ, ರಾಜ್ಯದ ಸಿಎಂ ಈ ವಿಚಾರವನ್ನು ಗಂಭೀರವಾಗಿ ಪರಿಗಣನೆ ಮಾಡಿದ್ದಾರೆ ಎಂದರು.

ರಾಜ್ಯದ ಸಿಎಂ ಸಿದ್ದರಾಮಯ್ಯ ಸಲಹೆಯಂತೆ ಕಂದಾಯ, ಸಹಕಾರಿ ಮತ್ತು ಗೃಹ ಸಚಿವಾಲಯ ಇದನ್ನು ಗಂಭೀರವಾಗಿ ಪರಿಗಣಿಸಿ ಹೊಸ ಕಾನೂನುಗ ರಚಿಸಲು ಮುಂದಾಗಿದ್ದೇವೆ, ಕಾನೂನು ಬಾಹಿರವಾಗಿ ಒತ್ತಾಯವಾಗಿ ಹಣ ವಸೂಲಿ ಮಾಡಿದ್ರೇ ತಕ್ಷಣ ಕ್ರಮ ಕೈಗೊಳ್ಳುವಂತೆ ರಾಜ್ಯದ ಎಲ್ಲಾ ಡಿಸಿ ಮತ್ತು ಎಸ್ಪಿಗಳ ಮೂಲಕ ತಹಶೀಲ್ದಾರ್ ಹಾಗೂ ಪೊಲೀಸ್ ಇಲಾಖೆಗೆ ಸೂಚಿಸಲಾಗಿದೆ ಎಂದರು. ಕುರಂಕೋಟೆಯ ಮಾರುತಿಗೆ 2ಲಕ್ಷ 50ಸಾವಿರ ಸಾಲ ನೀಡಿ ಆತನಿಂದ 4ಲಕ್ಷ 50ಸಾವಿರ ಹಣ ವಸೂಲಿ ಮಾಡಿದೆ, ನಂತರವು ಕಿರುಕುಳ ನೀಡಿ ಮನೆಗೆ ಬೀಗ ಹಾಕಿ ಅಡಮಾನದ ಬರಹ ಬರೆದು ಅವಮಾನ ಮಾಡಿ ಮನೆಯ ಪತ್ರ ಪಡೆದಿದ್ದಾರೆ,

ವ್ಯವಸ್ಥಾಪಕ ಮತ್ತು ಮೇಲ್ವಿಚಾರಕನ ಮೇಲೆ ಪ್ರಕರಣ ದಾಖಲಾಗಿದೆ, ಇಡೀ ರಾಜ್ಯದಲ್ಲಿ ನಡಿತೀರೊದು ಗಮನದಲ್ಲಿದೆ ಎಂದರು.

ಗ್ರಾಹಕರಿಗೆ ಸಾಲದ ಅವಶ್ಯಕತೆ ಮತ್ತು ಸಾಲ ಕಟ್ಟುವ ಶಕ್ತಿಯಿದ್ದರೇ ಮಾತ್ರ ಸಾಲ ಪಡಿಬೇಕು, ಇಲ್ಲವಾದ್ರೇ ವಿನಾಕಾರಣ ಸಾಲ ಪಡೆದು ಸಮಸ್ಯೆಗೆ ಸಿಲುಕಬಾದ್ರು, ಫೈನಾನ್ಸ್ ಕಂಪನಿಯವ್ರು ಆರ್‌ಬಿಐ ಗೈಡ್‌ಲೈನ್ ಪರಿಶೀಲನೆ ನಡೆಸಿ ಸಾಲ ನೀಡಬೇಕಿದೆ, ಇಲ್ಲವಾದ್ರೇ ಸಾಲದ ವಿಚಾರವಾಗಿ ಸಮಸ್ಯೆ ಉದ್ಭವವಾಗುತ್ತೇ, ಅದಕ್ಕೆ ಫೈನಾನ್ಸ್ ಕಂಪನಿಯವ್ರೇ ಹೊಣೆಗಾರರು ಎಂದು ತಿಳಿಸಿದರು.

ಭೇಟಿಯ ವೇಳೆಯಲ್ಲಿ ತುಮಕೂರು ಜಿಪಂ ಸಿಇ ಡಾ.ಕೆ.ಪ್ರಭು, ಎಸ್ಪಿ ಕೆ.ವಿ.ಅಶೋಕ್, ಮಧುಗಿರಿ ಎಸಿ ಕೊಟ್ಟೂರು ಶಿವಪ್ಪ, ಕೊರಟಗೆರೆ ತಹಶೀಲ್ದಾರ್ ಮಂಜುನಾಥ. ಕೆ, ಸಿಪಿಐ ಅನಿಲ್, ಪಿಎಸೈ ಚೇತನ್ ಸೇರಿದಂತೆ ಇತರರು ಇದ್ದರು.

## ಹೆಚ್.ಕೋಡಹಳ್ಳಿಯಲ್ಲಿ ಗಂಗಮ್ಮ ದೇವಿಯ ಮಹೋತ್ಸವ

**ಮುಳಬಾಗಿಲು:** ತಾಲೂಕಿನಲ್ಲಿ ನಿರಂತರವಾಗಿ ಅನೇಕ ಸಮಾಜಮುಖಿ ಕಾರ್ಯಕ್ರಮಗಳು ಹಾಗೂ ಜನರ ಕಷ್ಟ ಸುಖಗಳಿಗೆ ಸ್ಪಂದಿಸುತ್ತಾ ಕೆಲಸ ಮಾಡಿಕೊಂಡು ಬರುತ್ತಿದ್ದು, ಹೋಬಳಿ ಹಾಗೂ ತಾಲೂಕು ಮಟ್ಟದಲ್ಲಿ ಯುವಕರಿಗೆ ಕ್ರೀಡೆ, ಸರ್ಕಾರಿ ಶಾಲೆಗಳಿಗೆ ಹಾಗೂ ರೈತರಿಗೆ ಅನೇಕ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡುತ್ತೇನೆ ಎಂದು ಎಂ.ಗೊಲ್ಲಹಳ್ಳಿ ಪ್ರಭಾಕರ್ ರವರು ಹೇಳಿದರು.



ತಾಲೂಕಿನ ಹೆಬ್ಬಣಿ ಪಂಚಾಯಿತಿ ಹೆಚ್ ಕೋಡಹಳ್ಳಿ ಗ್ರಾಮದಲ್ಲಿ ಸಂಕ್ರಾಂತಿ ಹಬ್ಬ ಹಾಗೂ ಗಂಗಮ್ಮನ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿ ದೇವರ ದರ್ಶನ ಪಡೆದು ರಸಮಂಜರಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ ಪ್ರತಿ ವರ್ಷ ಸಂಕ್ರಾಂತಿ ಹಬ್ಬ ಹಾಗೂ ಗಂಗಮ್ಮನ ಜಾತ್ರೆಯನ್ನು ಬಹಳ ಅದ್ದೂರಿಯಾಗಿ ಮಾಡುತ್ತಿದ್ದಾರೆ. ಈ ಗ್ರಾಮಕ್ಕೆ , ಸುತ್ತಮುತ್ತಲಿನ ಗ್ರಾಮಗಳಿಗೆ ಹಾಗೂ ತಾಲೂಕಿನ ಜನತೆಗೆ ಒಳ್ಳೆಯದು ಮಾಡಿ ತಾಲೂಕಿನಲ್ಲಿ ಒಳ್ಳೆಯ ಮಳೆ ಬೆಳೆಯಾಗಿ ಜನರು ಸಮೃದ್ಧಿಯಿಂದ ಜೀವನ ಸಾಗಿಸಬೇಕೆಂದು ಆ ದೇವರಲ್ಲಿ ಪ್ರಾರ್ಥಿಸುತ್ತಾ, ಶಾಸಕರಾದ ಸಮೃದ್ಧಿ ಮಂಜುನಾಥ್ ರವರು, ಹಾಗೂ ಜೆಡಿಎಸ್ ನ ತಾಲೂಕು ಅಧ್ಯಕ್ಷರಾದ ಕಾಡೇನಹಳ್ಳಿ ನಾಗರಾಜ್ ರವರು ತಾಲೂಕಿನಲ್ಲಿ ಅನೇಕ ಕೆಲಸ ಕಾರ್ಯಗಳನ್ನು ಮಾಡುತ್ತಾ ಅಭಿವೃದ್ಧಿ ಕಡೆಗೆ ಕೊಂಡೆತಿದ್ದಾರೆ. ಪ್ರತಿ ವರ್ಷದಂತೆ ಈ ವರ್ಷ ಕೂಡ ಓಂ ಶಕ್ತಿ ತಾಯಂದಿರಿಗೆ ಉಚಿತ ಬಸ್ ಸೇವೆಯನ್ನು ನೀಡಿ ಕಲ್ಪಿಸಿ ಕೊಟ್ಟಿರುತ್ತಾರೆ, ಈ ಬಸ್ಸುಗಳ ಚಾಲನೆಯನ್ನು ಮಾಡಿದ ಸಂದರ್ಭದಲ್ಲಿ ಗ್ರಾಮದ ಯುವಕರಿಗೆ ಹಾಗೂ ಗ್ರಾಮಸ್ಥರಿಗೆ ಈ ಒಂದು ಹಬ್ಬಕ್ಕೆ ರಸಮಂಜರಿ ಕಾರ್ಯಕ್ರಮವನ್ನು ಆಯೋಜನೆ ಮಾಡಬೇಕೆಂದು ಕೇಳಿದಾಗ ಮಾತನ್ನು ಕೊಟ್ಟಿದ್ದೆ ಇದೇ ಮಾತಿನ ಪ್ರಕಾರ ಈ ಒಂದು ರಸಮಂಜನ ಕಾರ್ಯಕ್ರಮವನ್ನು ಮಾಡಲಾಯಿತು. ಅದೇ ರೀತಿ ನನ್ನೆದೆ ಆದ ಸಮಾಜ ಸೇವೆ ಹಾಗೂ ಜನರ ಕಷ್ಟ ಸುಖಗಳಿಗೆ ಸ್ಪಂದಿಸುತ್ತಾ ನಿಮ್ಮ ಮನೆಯ ಮಗನಾಗಿ ತಮ್ಮನಾಗಿ ಕೆಲಸ ಮಾಡಿಕೊಂಡು ಬರುತ್ತಿದ್ದು ಮುಂದಿನ ದಿನದಲ್ಲೂ ಸಹ ರೈತರಿಗೆ ಹಾಗೂ ಬಡ ಜನರಿಗೆ ಸಹಾಯ ಮಾಡುವುದಾಗಿ ಹೇಳಿದರು .

ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಟಿ.ಕೆ ಭಾಸ್ಕರ್ ರೆಡ್ಡಿ, ಮುಷ್ಟೂರು ಗ್ರಾಮ ಪಂಚಾಯತಿ ಉಪಾಧ್ಯಕ್ಷರಾದ ಪೆದ್ದೂರು ವರದಪ್ಪ, ಸದಸ್ಯರಾದ ಕೋಡಹಳ್ಳಿ, ನಾಗಾರ್ಜುನ, ಸುಚಿತ್ರ ಗಂಗಾಧರ್ , ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷರಾದ ಶಾಂತಮ್ಮ ಶಂಕರಪ್ಪ, ಕೊತ್ತೂರು ಶ್ರೀನಿವಾಸ್, ಮೌಲಾಸಾಬ್, ಜೆ.ಕೆ ಶ್ರೀನಿವಾಸ್ , ರಾಸುಪಲ್ಲಿ ಅಪ್ಪಯ್ಯ, ಮನೋಹರ್, ಜಗನ್, ಗುಡಿಪಲ್ಲಿ ಹಾಗೂ ರಾಜೇಂದ್ರಹಳ್ಳಿ ಜೆಡಿಎಸ್ ಹಿರಿಯ ಮುಖಂಡರು, ಈ ರಸಮಂಜರಿವನ್ನು ಆಯೋಜನೆಗೆ ಸಹಕರಿಸಿದ ಬಾಲು, ವೆಂಕಟರಾಮಪ್ಪ, ರಾಮಚಂದ್ರ,ಸುರೇಶ್, ಗದ್ದರ್ ಶ್ರೀನಿವಾಸ್, ಹೆಚ್. ಕೋಡಹಳ್ಳಿ ಗ್ರಾಮಸ್ಥರು, ಸುತ್ತಮುತ್ತಲಿನ ಗ್ರಾಮಸ್ಥರು, ಗ್ರಾಮ ಪಂಚಾಯತಿ ಸದಸ್ಯರುಗಳು, ಕಾರ್ಯಕರ್ತರು, ಸಾರ್ವಜನಿಕರು, ಭಕ್ತಾದಿಗಳು ಭಾಗವಹಿಸಿದ್ದರು.

## ಗ್ರಾ.ಪಂ.ಮಾಜಿ ಅಧ್ಯಕ್ಷನ ಮಗನ ಕೊಲೆ



**ಚಿಕ್ಕಬಳ್ಳಾಪುರ:** ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷನ ಮಗನನ್ನ ಕೊಲೆ ಮಾಡಿ ಚರಂಡಿಯಲ್ಲಿ ಮುಚ್ಚಿ ಹಾಕಿ ಕೊಲೆಗಾರ ಎಸ್ಕೇಪ್ ಆಗಿರುವ ಘಟನೆ ಚಿಕ್ಕಬಳ್ಳಾಪುರ ತಾಲೂಕಿನ ಮಲಸನಹಳ್ಳಿ ಕೆರೆ ಬಳಿ ಇರುವ ಬಡಾವಣೆಯಲ್ಲಿ ನಡೆದಿದೆ.

ಹಾರೋಬಂಡೆ ಗ್ರಾಮದ ಮಾಜಿ ಗ್ರಾಮ ಪಂಚಾಯತಿ ಅಧ್ಯಕ್ಷ ನಾಗರೆಡ್ಡಿ ಮಗ 30 ವರ್ಷದ ಮಾರುತೇಶ್ ಕೊಲೆಯಾಗಿರುವ ದುರ್ದೈವಿ. ಅಂದಹಾಗೆ ಪಾಳುಬಿದ್ದ ಬಡಾವಣೆಯೊಂದರ ಚರಂಡಿಯಲ್ಲಿ ಮೃತದೇಹ ಪತ್ತೆಯಾಗಿದೆ. ಕೊಲೆಯಾದ ಮಾರುತೇಶ್ ಪ್ಲಂಬರ್ ಹಾಗೂ ಎಲೆಕ್ಟ್ರಿಕ್ ಕೆಲಸ ಮಾಡುತ್ತಿದ್ದ, ಕುಡಿದ ಅಮಲಿನಲ್ಲಿ ಜೊತೆಗಾರನಿಂದಲೇ ಕೊಲೆಯಾಗಿರುವ ಶಂಕೆ ವ್ಯಕ್ತವಾಗಿದೆ.

ಘಟನಾ ಸ್ಥಳದಲ್ಲಿ ಬೈಕ್ ಹಾಗೂ ಮದ್ಯದ ಬಾಟಲಿಗಳು ಪತ್ತೆಯಾಗಿವೆ. ಮೂರು ದಿನಗಳಿಂದ ನಾಪತ್ತೆಯಾಗಿದ್ದ ಮಾರುತೇಶ್ ಇಂದು ಶವವಾಗಿ ಪತ್ತೆಯಾಗಿದ್ದಾನೆ. ಸ್ಥಳಕ್ಕೆಚಿಕ್ಕಬಳ್ಳಾಪುರ ಎಸ್ಪಿ ಕುಶಲ್ ಚೌಕ್ಸೆ ಭೇಟಿ ಪರಿಶೀಲನೆನಡೆಸಿದರು.

ಇನ್ನೂ ಶಂಕಿತ ಆರೋಪಿಯೊರ್ವ ಗ್ರಾಮದಲ್ಲಿ ಕೊಲೆ ಮಾಡಿರುವ ಬಗ್ಗೆ ಅಸ್ಪಸ್ತವಾಗಿ ಮಾತನಾಡಿದ್ದ ಎನ್ನಲಾಗಿದ್ದು ಇದರ ಸುಳಿ ಮೇರೆಗೆ ಪರಿಶೀಲನೆ ಮಾಡಿದಾಗ ಮೃತದೇಹ ಇರೋದು ಪತ್ತೆಯಾಗಿದೆ.

ಹೀಗಾಗಿ ಪೊಲೀಸರು ಶಂಕಿತ ಆರೋಪಿಯ ಬೆನ್ನುಬಿದ್ದಿದ್ದಾರೆ, ಆತನ ಬಂಧನದ ಬಳಿಕ ಕೊಲೆಗೆ ಅಸಲಿ ಕಾರಣ ತಿಳಿದುಬರಲಿದೆ.

## ಕಾಡು ಹಂದಿ ಬೇಟೆಗೆ ಸಂಚು: ಬಂಧನ



**ಚಾಮರಾಜನಗರ:** ಕಾಡುಹಂದಿ ಬೇಟೆಗೆ ಹೊಂಚು ಹಾಕಿದ್ದ ಮೂವರನ್ನು ಬಂಧಿಸಿರುವ ಘಟನೆ ತಾಲೂಕಿನ ಮೇಲಾಜಿಪುರ ಸಮೀಪ ನಡೆದಿದೆ.

ಚಾಮರಾಜನಗರ ತಾಲೂಕಿನ ಪಣ್ಯದಹುಂಡಿ ಗ್ರಾಮದ ಕುಮಾರ್, ಹಾಸನದ ಚಂದನ್ ಹಾಗೂ ರಾಮನಗರ ಜಿಲ್ಲೆಯ ಚನ್ನಪಟ್ಟಣದ ವಿವೇಕ್ ಬಂಧಿತರು. ಕಾರಿನಲ್ಲಿ ಹೊಂಚು ಹಾಕಿ ಕುಳಿತಿದ್ದ ಇವರುಗಳನ್ನು ಚಾಮರಾಜನಗರ ಗ್ರಾಮಾಂತರ ಠಾಣೆ ಪೊಲೀಸರು ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ. ಬಂಧಿತರಿಂದ ಎರಡು ನಾಡ ಬಂದೂಕು, ಆರು ಸಜೀವ ಕಾಟ್ರೇಜ್ಗಳು, ಕಬ್ಬಿಣದ ಬಾಲ್ಸ್, ಕಾರು ಮತ್ತು ಬೈಕ್ ವಶಕ್ಕೆ ಪಡೆಯಲಾಗಿದೆ. ಈ ಸಂಬಂಧ ಚಾಮರಾಜನಗರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ರಸ್ತೆಬದಿ ಕಾದಾಡಿದ ಕರಡಿಗಳು

**ಚಾಮರಾಜನಗರ:** ಎರಡು ಕರಡಿಗಳು ರಸ್ತೆ ಬದಿ ಕಾದಾಡಿರುವ ಘಟನೆ ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲೂಕಿನ ಬಿಳಿಗಿರಿ ರಂಗನ ಬೆಟ್ಟ ರಸ್ತೆಯಲ್ಲಿ ನಡೆದಿದೆ.


ಕರಡಿಗಳ ಕಾದಾಟದ ದೃಶ್ಯ ಪ್ರವಾಸಿಗರ ಮೊಬೈಲ್ನಲ್ಲಿ ಸೆರೆಯಾಗಿದ್ದು, ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಬಿಳಿಗಿರಿ ರಂಗನ ಬೆಟ್ಟಕ್ಕೆ ಹೋಗುವ ರಸ್ತೆ ಬದಿಯ ಚಕ್ ಪೋಸ್ ಬಳಿಯ ಮರಿಯಪ್ಪನ ಪಾಲದ ಬಳಿ ದಿಢೀರನೆ ಒಂದು ಕರಡಿ ಮತ್ತೊಂದು ಕರಡಿಯನ್ನು ಅಟ್ಟಾಡಿಸಿಕೊಂಡು ಹೋಗಿ ಜಗಳ ಆಡಿದೆ.



ಚಾಮರಾಜನಗರ ಜಿಲ್ಲೆಯ ಬಿಳಿಗಿರಿ ರಂಗನ ಬೆಟ್ಟದಲ್ಲಿ ಇತ್ತೀಚೆಗೆ ಹೆಚ್ಚಾಗಿ ಕರಡಿಗಳು ಕಾಣಿಸಿಕೊಳ್ಳುತ್ತಿದ್ದು, ಎರಡು ಕರಡಿಗಳು ಜೋರಾಗಿ ಕಿರುಚಾಡಿ ಕಾದಾಡಿದ್ದನ್ನು ಕಂಡ ಪ್ರವಾಸಿಗರು ಒಂದು ಕ್ಷಣ ಆತಂಕಕ್ಕೆ ಒಳಗಾಗಿದ್ದಾರೆ. ಬಿಳಿಗಿರಿ ರಂಗನ ಬೆಟ್ಟಕ್ಕೆ ಪ್ರವಾಸಿಗರು ತೆರಳುವಾಗ ಏಕಾಏಕಿ ಕರಡಿಯೊಂದು ಮತ್ತೊಂದು ಕರಡಿಯನ್ನು ಅಟ್ಟಾಡಿಸಿಕೊಂಡು ಕಾದಾಡಿದೆ.

ಇವೆರಡು ಕರಡಿಗಳ ಕಿತ್ತಾಟವನ್ನು ಬದಿಯಲ್ಲಿ ನಿಂತು ನೋಡುತ್ತಿದ್ದ ಮತ್ತೊಂದು ಕರಡಿ ಸೈಲೆಂಟಾಗಿ ಹೋಗಿತ್ತು.

## ದಾರಿಯಲ್ಲಿ ಅಕ್ರಮ ಕಾಪೌಂಡ್: ಮನೆಗೆ ತೆರಳಲು ದಾರಿಗಾಗಿ 40 ಕುಟುಂಬ ದಯಾಮರಣಕ್ಕೆ ಮನವಿ



ಚಾಮರಾಜನಗರ: ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಬರಗಿ ಗ್ರಾಮದ 40 ಕುಟುಂಬಕ್ಕೆ ಮನೆಗೆ ಹೋಗಲು ದಾರಿ ಇಲ್ಲ, ಬಿಡಿಸಿ ಕೊಡಿ ಎಂದು ಮನವಿ ಕೊಟ್ಟರೂ ದಾರಿ ಬಿಡಿಸದ ಕಾರಣ ಆಕ್ರೋಶಗೊಂಡ 40 ಕುಟುಂಬದವರು ಸಾಮೂಹಿಕ ದಯಾಮರಣ ಕೋರಿ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಹಸೀಲಾರ್ ಮೂಲಕ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದ ಪ್ರಸಂಗ ನಡೆದಿದೆ.

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಬರಗಿ ಗ್ರಾಮದಲ್ಲಿ ರೈತಸಂಘದ ಮುಖಂಡರ ಸಾರಥ್ಯದಲ್ಲಿ ಬರಗಿ ಗ್ರಾಮದ 40 ಕುಟುಂಬದ ಮುಖ್ಯಸ್ಥರು ಗುಂಡ್ಲುಪೇಟೆ ತಹಸೀಲ್ದಾರ್ ಕಚೇರಿಗೆ ಆಗಮಿಸಿ ಶಿರಸ್ತೇದಾರ್ ಮಹೇಶ್‌ಗೆಮನವಿಕೊಟ್ಟಿದ್ದು, ಜಿಲ್ಲಾಧಿಕಾರಿಗಳಿಗೆ ಕಳುಹಿಸಿ ಒತ್ತಾಯಿಸಿದ್ದಾರೆ. ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಬರಗಿ ಗ್ರಾಮದ ಬಿ.ಕೆ. ದೇವಣ್ಣ, ನಾಗಪ್ಪ ಗ್ರಾಮದ 40 ಕುಟುಂಬ ತಿರುಗಾಡುವ ದಾರಿಯಲ್ಲಿ ಅಕ್ರಮವಾಗಿ ಮನೆ ಹಾಗೂ ಕಾಂಪೌಂಡ್ ನಿರ್ಮಿಸಿದ್ದಾರೆ. ಈ ಬಗ್ಗೆ ಗ್ರಾಮದ 40 ಮಂದಿ ಕುಟುಂಬಸ್ಥರು ಜಿಪಂ ಸಿಇಒ, ತಾಪಂ ಇಒ ಹಾಗೂ ಬರಗಿ ಗ್ರಾಪಂ ಪಿಡಿಒಗೆ ದೂರು ಸಲ್ಲಿಸಿದ್ದರು.

ದೂರಿನ ಬಳಿಕ ಗ್ರಾಪಂನಲ್ಲಿ ನಿರ್ಣಯ ಮಾಡಿ 40 ಕುಟುಂಬದ ಮನೆಗಳಿಗೆ ತೆರಳಲು ದಾರಿ ಬಿಡಬೇಕು ಎಂದು ತೀರ್ಮಾನ ಆಗಿತ್ತು. ಒತ್ತುವರಿ ಬಿಡುವಂತೆ ಬಿ.ಕೆ.ದೇವಣ್ಣ ಹಾಗೂ ನಾಗಪ್ಪಗೆ ತಿಳಿಸಲಾಗಿತ್ತು.

ಗ್ರಾಪಂ ನಿರ್ಣಯಕ್ಕೂ ಬೆಲೆ ಕೊಡದ ಬಿ.ಕೆ. ದೇವಣ್ಣ ಹಾಗೂ ನಾಗಪ್ಪ ರಾಜಕೀಯ ಪ್ರಭಾವ ಬಳಸಿ ಗ್ರಾಮದಲ್ಲಿ ತಿರುಗಾಡಲು ಅವಕಾಶ ನೀಡುತ್ತಿಲ್ಲ. ಅಧಿಕಾರಿಗಳಿಗೆ ಮತ್ತೆ ಮನವಿ ಮಾಡಿದರೂ ಯಾವುದೇ ಪ್ರಯೋಜವಾಗಿಲ್ಲ. ವಾಸದ ಮನೆಗಳಿಗೆ ಹೋಗಲು ದಾರಿಯೇ ಇಲ್ಲ ಅಂದೇಲೆ ಜೀವನ ನಡೆಸುವುದು ಹೇಗೆ ಎಂಬ ನೋವಿನಿಂದ 40 ಕುಟುಂಬಗಳಿಗೆ ಸಾಮೂಹಿಕ ದಯಾಮರಣನೀಡಬೇಕುಎಂದು ಪ್ರತ್ಯೇಕವಾದ ದೂರಿನಲ್ಲಿ ಹೇಳಿದ್ದಾರೆ.

## ಫೆ 8ರಂದು ಸಹಕಾರ ಜಾಗೃತಿ ಸಮಾವೇಶ

**ಕುಕನೂರು:** ಪಟ್ಟಣದ ಎಪಿಎಂಸಿ ಆವರಣದಲ್ಲಿ ಫೆಬ್ರವರಿ 8 ರಂದು ತಾಲೂಕು ಮಟ್ಟದ ಸಹಕಾರ ಜಾಗೃತಿ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಚಂದ್ರಶೇಖರಯ್ಯ ಹಿರೇಮಠ ಹೇಳಿದರು.

ಪಟ್ಟಣದ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಮಾಧ್ಯಮಗೋಷ್ಠಿ ನಡೆಸಿ ಜಾಗೃತಿ ಸಮಾವೇಶದ ಮಾಹಿತಿ ನೀಡಿದರು. ತಾಲೂಕಿನಲ್ಲಿ ಸಹಕಾರ ರಂಗವನ್ನು ಬಲಪಡಿಸಲು, ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಆರ್ಥಿಕವಾಗಿ ಉತ್ತೇಜಿಸಲು ಮತ್ತು ರೈತರಿಗೆ ಸಹಕಾರ ಬ್ಯಾಂಕ್ ನ ಸೌಲಭ್ಯಗಳನ್ನು ಮನವರಿಕೆ ಮಾಡುವ ಸಲುವಾಗಿ ಈ ಜಾಗೃತಿ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಇಡೀ ರಾಜ್ಯದಲ್ಲಿ ಜಾಗೃತಿ ಸಮಾವೇಶ ಪ್ರಥಮ, ಮೊಟ್ಟ ಮೊದಲನೆಯದಾಗಿದ್ದು, ಸರ್ಕಾರ 2025 ನೆ ವರ್ಷವನ್ನು ಜಾಗತಿಕ ಸಹಕಾರ ವರ್ಷವೆಂದು ಘೋಷಣೆ ಮಾಡಿದೆ. ಹೀಗಾಗಿ ರೈತರನ್ನು ಮತ್ತೆ ಸಹಕಾರ ಕ್ಷೇತ್ರಗಳತ್ತ ಸೆಳೆಯಲು ತಾಲೂಕಿನಲ್ಲಿ ವಿಶೇಷ ಜಾಗೃತಿ ಸಮಾವೇಶ ಮಾಡಲಾಗುತ್ತಿದೆ. ಈಗಾಗಲೇ ಸಹಕಾರ ಕ್ಷೇತ್ರದಿಂದ ರೈತರು ವಿಮುಖರಾಗಿದ್ದಾರೆ. ಅವರನ್ನು ಮತ್ತೆ ಸಹಕಾರ ಬ್ಯಾಂಕ್ ನ ಕಡೆ ಬರುವಂತೆ ಮಾಡಿ ರೈತರಿಗೆ ಲಾಭವಾಗುವ ನಿರ್ದಿಷ್ಟ ಉದ್ದೇಶದೊಂದಿಗೆ ಈ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಸಮಾವೇಶ ಕಾರ್ಯಕ್ರಮದಲ್ಲಿ ಸಹಕಾರ ಇಲಾಖೆ ಸಚಿವ ಕೆ ಎನ್ ರಾಜಣ್ಣ, ಸಚಿವರಾದ ಎಚ್ ಕೆ ಪಾಟೀಲ್, ಶಿವರಾಜ್ ತಂಗಡಗಿ, ಆರ್ಥಿಕ ಸಲಹೆಗಾರ ಬಸವರಾಜ್ ರಾಯರಡ್ಡಿ ಸೇರಿದಂತೆ ಅನೇಕ ಧುರೀಣರು ಪಾಲ್ಗೊಳ್ಳಲಿದ್ದು, ರೈತರು ಜನಸಾಮಾನ್ಯರು ಸಮಾವೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಚಂದ್ರಶೇಖರಯ್ಯ ಹಿರೇಮಠ ಮನವಿ ಮಾಡಿಕೊಂಡಿದ್ದಾರೆ.

ಸುದ್ದಿಗೋಷ್ಟಿಯಲ್ಲಿ ಆರ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಶೇಖರ್ ಗೌಡ ಉಳ್ಳಾಗಡ್ಡಿ, ಪ್ರಭಾರಿ ಉಪ ನಿಬಂಧಕ ಪ್ರಕಾಶ್ ಸಜ್ಜನ್, ನಾರಾಯಣಪ್ಪ ಹರಪನಹಳ್ಳಿ, ಸಿದ್ದಯ್ಯ ಕಳ್ಳಿಮಠ, ರಾಮಣ್ಣ ಬಜೇಂತ್ರಿ, ರಾಘವೇಂದ್ರ ಆಚಾರ್, ಭೀಮರೆಡ್ಡಿ ಶ್ಯಾಡ್ಲಗೇರಿ ಇತರರು ಉಪಸ್ಥಿತರಿದ್ದರು.

## ಭೀಮಾ ಕೋರೆಗಾವ್ ವಿಜಯೋತ್ಸವ



**ಕುಕನೂರು:** ದಲಿತರ ಆತ್ಮ ಗೌರವ ಮತ್ತು ಹಕ್ಕುಗಳ ಸಂಕೇತವಾಗಿ ಐನೂರು ಮಹರ್ ಸೈನಿಕರು ಪೇಶ್ವೇಗಳ ಇಪ್ಪತೆಂಟು ಸಾವಿರ ಸೈನ್ಯ ಬಲವನ್ನು ಸೋಲಿಸಿದ ಇತಿಹಾಸದ ಸವಿ ನೆನಪಿನ ದಿನವಾಗಿ ಕುಕನೂರು ಪಟ್ಟಣದಲ್ಲಿ 207 ನೇ ಭೀಮಾ ಕೋರೆಗಾವ್ ವಿಜಯೋತ್ಸವ ಆಚರಣೆ ಮಾಡಲಾಯಿತು.

ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಅರವಿಂದ್ ಗೌಡ ಪಾಟೀಲ್ ವಿಜಯೋತ್ಸವದಲ್ಲಿ ಭಾಗವಹಿಸಿ ಮಾತನಾಡಿ, ಜನೆವರಿ 1818 ರಲ್ಲಿ ನಡೆದ ಭೀಮಾ ಕೋರೆಗಾವ್ ವಿಜಯೋತ್ಸವ ಇಂದಿಗೂ ಸ್ಮರಣಿಯ ದಿನವಾಗಿದೆ. ಐದುನೂರು ಮಂದಿ ಮೆಹರ್ ಗಳು ಸುಮಾರು ಇಪ್ಪತೆಂಟು ಸಾವಿರ ಪೇಶ್ವೇ ಸೈನಿಕರನ್ನು ಸೋಲಿಸಿ ಇತಿಹಾಸ ಸೃಷ್ಟಿಸಿದ್ದಾರೆ. ಇಂದಿಗೂ ಕೋರೆಗಾವ್ ವಿಜಯಸ್ಥಂಭ ಅದಕ್ಕೆ ಸಾಕ್ಷಿಯಾಗಿದೆ ಅರವಿಂದ್ ಗೌಡ ಪಾಟೀಲ್ ಹೇಳಿದರು.

ವಿಜಯೋತ್ಸವದಲ್ಲಿ ಬಸವರಾಜ್ ಡದೇಸಗೂರು, ತಾಲೂಕು ಪಂಚಾಯತ್ ಮಾಜಿ ಉಪಾಧ್ಯಕ್ಷ ಕಳಕಪ್ಪ ಕಂಬಳಿ,ಬಸವರಾಜ್ ಕ್ಯಾವಿಟರ್, ಮಾರುತಿ ಹೊಸಮನಿ, ಲಕ್ಷ್ಮಣ ಕಾಳಿ, ನಾಗಪ್ಪ ಕಲ್ಮನಿ, ಶರಣಪ್ಪ ಕಾಳಿ, ವೀರೇಶ್ ಬಂಕದಮನೆ, ಅಡಿವಪ್ಪ ಚಲವಾದಿ, ಮಂಜುನಾಥ್ ಮಾಲಗತ್ತಿ ಅನೇಕರು ಪಾಲ್ಗೊಂಡಿದ್ದರು.

# ಮೊದಲ ಬಾರಿಗೆ ಶ್ರೀಪಂಚಾಯಿತಿ ಅಖಾಡದಿಂದ ಜಗದ್ಗುರು ನೇಮಕ

**ಪ್ರಯಾಗ್‌ರಾಜ್:** ನಾಗ ಸನ್ಯಾಸಿಗಳು ಮತ್ತು ಮಹಾಮಂಡಳೇಶ್ವರು ಹೊಂದಿರುವ ಹಲವು ಅಖಾಡಗಳು ಮಹಾ ಕುಂಭಮೇಳದಲ್ಲಿ ಕಾಣಬಹುದಾಗಿದೆ. ಶ್ರೀ ಪಂಚಾಯಿತಿ ಅಖಾಡ ನಿರಂಜನಿ ಬ್ರಹ್ಮರ್ಷಿ ಕುಮಾರ ಸ್ವಾಮಿಗಳಿಗೆ ಜಗದ್ಗುರು ಬಿರುದು ನೀಡಿ ಗೌರವಿಸಿದರು. ಈ ಅಖಾಡದಿಂದ ಸಂತರಿಗೆ ಜಗದ್ಗುರು ಎಂಬ ಬಿರುದು ನೀಡಿರುವುದು ಇದೇ ಮೊದಲು ಎಂಬುದು ವಿಶೇಷ.

ಅಖಾಡದ ಕಾರ್ಯದರ್ಶಿ ಮಹಂತ್ ರವೀಂದ್ರ ಪುರಿ ಮಾತನಾಡಿ, ಅಖಾಡಗಳಲ್ಲೇ ಮೊದಲ ಬಾರಿಗೆ ಜಗದ್ಗುರುಗಳನ್ನು ನೇಮಕ ಮಾಡಲಾಗಿದೆ. ಮಹಮಂಡಲೇಶ್ವರ ಅವರು ಜಗದ್ಗುರುಗಳಾಗಿರುತ್ತಾರೆ. ಬಸಂತ ಪಂಚಮಿಯ ಅಮೃತ ಸ್ನಾನಕ್ಕೂ ಮುನ್ನ ಪಂಚಾಯಿತಿ ಅಖಾಡ ನಿರಂಜನಿಯವರು ಮಂತ್ರ ಪಂಡಿತರಾದ ಮಹಾಮಂಡಲೇಶ್ವರ ಬ್ರಹ್ಮರ್ಷಿ ಕುಮಾರ ಸ್ವಾಮಿಗಳಿಗೆ ಜಗದ್ಗುರು ಪಟ್ಟ ಪ್ರದಾನ ಮಾಡಿದರು. ಶುಕ್ರವಾರ ನಿರಂಜನಿ ಅಖಾಡದ ಶಿಬಿರದಲ್ಲಿ ಆಚಾರ್ಯ ಮಹಾಮಂಡಲೇಶ್ವರ ಕೈಲಾಶಾನಂದ ಗಿರಿ ಹಾಗೂ ಕಾರ್ಯದರ್ಶಿ ಮಹಂತ್ ರವೀಂದ್ರ ಪುರಿ ಸೇರಿದಂತೆ ವಿವಿಧ ಮಹಾಮಂಡಲೇಶ್ವರರ ಸಮ್ಮುಖದಲ್ಲಿ ಮಂತ್ರ ಪಠಣದ ನಡುವೆ ಪುಷ್ಪಾರ್ಚನೆ ಮಾಡುವ ಮೂಲಕ ಪೂರ್ಣ ವಿಧಿವಿಧಾನಗಳನ್ನು ನೆರವೇರಿಸಲಾಯಿತು.

ನಿರಂಜನ ಆಖಾಡದ ಆಚಾರ್ಯ ಪೀಠಾಧೀಶ್ವರ ಸ್ವಾಮಿ ಕೈಲಾಶಾನಂದ ಗಿರಿ ಅವರ ಅನುಮತಿ ಮೇರೆಗೆ ಜಗದ್ಗುರುಗಳಾಗಿ ಜಲ ಅಭಿಷೇಕದ ನಂತರ ಪಟ್ಟಾಭಿಷೇಕ ಕಾರ್ಯ ನಡೆಯಿತು. ಪಟ್ಟಾಭಿಷೇಕಕ್ಕೂ ಮುನ್ನ ನಿರಂಜನಿ ಪೀಠಾಧೀಶ್ವರರು ವೇದ ಮಂತ್ರ ಪಠಣ ಮಾಡಿದರು. ಬಳಿಕ ವಿವಿಧ ಅಖಾಡಗಳಿಂದ ಸಾಧು ಸಂತರು ಆಗಮಿಸಿ ಜಗದ್ಗುರುಗಳಿಗೆ ಪುಷ್ಪಾರ್ಚನೆ ನಡೆಸಿದರು. ಅಖಿಲ ಭಾರತೀಯ ಅಖಾಡ ಪರಿಷತ್ತಿನ ಅಧ್ಯಕ್ಷ ಹಾಗೂ ನಿರಂಜನಿ ಅಖಾಡದ ಕಾರ್ಯದರ್ಶಿ ಮಹಂತ ರವೀಂದ್ರ ಪುರಿ ಮಾತನಾಡಿ, ಬ್ರಹ್ಮರ್ಷಿ ಕುಮಾರ ಸ್ವಾಮಿಗಳು ಹಲವು ವರ್ಷಗಳಿಂದ ಸನಾತನ ಧರ್ಮ ಪ್ರಚಾರ ನಡೆಸುತ್ತಿದ್ದು, ನಿರಂಜನಿ ಅಖಾಡದ ಮಹಾಮಂಡಲೇಶ್ವರನಾಗಿ ಕೆಲಸ ಮಾಡುತ್ತಿದ್ದಾರೆ. ಈಗ ಅವರಿಗೆ ಸನಾತನ ಧರ್ಮವನ್ನು ಜಗದ್ಗುರು ಎಂಬ ಬಿರುದು ನೀಡಲಾಗಿದೆ. ಅವರು ವೇದ ಬೀಜ ಮಂತ್ರದಲ್ಲಿ ನಿಪುಣರಾಗಿದ್ದು ಈ ಮಂತ್ರದ



ಮೂಲಕ ಅನೇಕ ಗುಣಪಡಿಸಲಾಗದ ಕಾಯಿಲೆಗೆ ಚಿಕಿತ್ಸೆ ನೀಡಿದ್ದಾರೆ. ನಿರಂಜನಿ ಅಖಾಡ ಇಂತಹ ಸಮರ್ಥ ಸಂತರಿಗೆ ಮೊದಲ ಬಾರಿ ಜಗದ್ಗುರುವಾಗಿ ನೇಮಕ ಮಾಡಿದೆ. ನಿರಂಜನಿ ಅಖಾಡದ ಮಹಾಮಂಡಲೇಶ್ವರ ಕುಮರ್ ಸ್ವಾಮಿ ಮಹಾರಾಜ್ ಮಾತನಾಡಿ, ಸನಾತನ ಧರ್ಮ ಬಲಗೊಳಿಸಲು ದೇಶದ ಮತ್ತು ವಿದೇಶದಲ್ಲಿ ಅವರು ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರ ವೇದ ಮಂತ್ರದಲ್ಲಿ ಅದ್ಬುತ ಶಕ್ತಿ ಇದೆ. ಎಲ್ಲ ರೀತಿಯ ಜನರ ಸಮಸ್ಯೆಯನ್ನು ಇದರಿಂದ ಅವರು ಗುಣಪಡಿಸಿದ್ದಾರೆ. ವಿದೇಶಿಗರು ಇದೀಗ ಸನಾತನ ಧರ್ಮದ ಶಕ್ತಿ ಗುರುತಿಸುತ್ತಿದ್ದಾರೆ. ಮಂತ್ರದ ಹೊರತಾಗಿ ಅವರು ಆಯುರ್ವೇದದ ಬಗ್ಗೆ ತಿಳಿದಿದ್ದಾರೆ ಎಂದರು.

ಇದೇ ವೇಳೆ, ನಿರಂಜನಿ ಅಖಾಡದ ಆಚಾರ್ಯ ಮಹಾಮಂಡಲೇಶ್ವರ ಸ್ವಾಮಿ ಕೈಲಾಶಾನಂದ ಗಿರಿ ಅವರಿಗೆ ಕಾಶಿ ವಿದ್ವತ್ ಪರಿಷತ್ ವತಿಯಿಂದ ಸನಾತನ ಧರ್ಮ ಮಾರ್ತಾಂಡ ಗೌರವ ನೀಡಲಾಯಿತು. ಅಖಿಲ ಭಾರತೀಯ ಅಖಾರ ಪರಿಷತ್ತಿನ ಅಧ್ಯಕ್ಷರಾದ ಮಹಂತ್ ರವೀಂದ್ರ ಪುರಿ ಅವರಿಗೆ ಮಹಾ ಜಗದ್ಗುರು ಎಂಬ ಬಿರುದನ್ನು ಸಹ ನೀಡಲಾಯಿತು.

# ರೈಲ್ವೆ ಸೀ ಬ್ರಿಡ್ಜ್ ಸಿದ್ಧ: ಶೀಘ್ರದಲ್ಲೇ ಕಾರ್ಯಾರಂಭ

**ರಾಮೇಶ್ವರಂ:** ತಮಿಳುನಾಡಿನ ರಾಮೇಶ್ವರಂನಲ್ಲಿ ನಿರ್ಮಿಸಲಾಗಿರುವ ದೇಶದ ಮೊದಲ ಲಂಬವಾಗಿ ತೆರೆಯುವ ಪಂಬನ್ ಸೀ ಬ್ರಿಡ್ಜ್ ಶೀಘ್ರದಲ್ಲೇ ರೈಲು ಸಂಚಾರಕ್ಕೆ ತೆರೆದುಕೊಳ್ಳಲಿದೆ. 110 ವರ್ಷ ಹಳೆಯ ಬ್ರಿಟಿಷ್ ಕಾಲದಲ್ಲಿ ನಿರ್ಮಿಸಲಾದ ಸೇತುವೆಗೆ ಬದಲಾಗಿ ಹೊಸ ಹಾಗೂ ವಿಶೇಷ ಪಂಬನ್ ಬ್ರಿಡ್ಜ್ ಅನ್ನು ಪಾಕ್ ಜಲಸಂಧಿ ಎಂದೇ ಗುರುತಿಸಲಾಗುವ ಮಂಡಪಂ ಹಾಗೂ ಪಂಬನ್ ರೈಲು ನಿಲ್ದಾಣಗಳ ನಡುವೆ ನಿರ್ಮಿಸಲಾಗಿದೆ.

ಅಧಿಕಾರಿಗಳು ನೀಡಿರುವ ಮಾಹಿತಿಯಂತೆ, ಈ ಸೇತುವೆ ರಾಮೇಶ್ವರಂಗೆ ಹೋಗುವ ಭಕ್ತರಿಗೆ ಮತ್ತು ಈ ದಾರಿಯಲ್ಲಿ ಸಾಗುವ ದೇಶದಾದ್ಯಂತದ ಪ್ರಯಾಣಿಕರಿಗೆ ಉತ್ತಮ ಸೌಲಭ್ಯವನ್ನು ಒದಗಿಸಲಿದೆ. ರಾಮೇಶ್ವರಂ ಧಾಮಕ್ಕೆ ಹೋಗುವ ಭಕ್ತರ ಪ್ರಯಾಣವನ್ನು ಸುಗಮಗೊಳಿಸಲಿದೆ. ಈ ಹೊಸ ಸೇತುವೆಯಿಂದಾಗಿ ಜನರ ಪ್ರಯಾಣದ ಅವಧಿ ಕಡಿಮೆಯಾಗಲಿದೆ. ಮಾತ್ರವಲ್ಲ ಪ್ರಯಾಣ ಹೆಚ್ಚು ಸುರಕ್ಷಿತ ಹಾಗೂ ಅನುಕೂಲಕರವಾಗಿರಲಿದೆ. ಈ ಸೇತುವೆಯಲ್ಲಿ ಶೀಘ್ರದಲ್ಲಿ ರೈಲ್ವೆ ಕಾರ್ಯಾಚರಣೆಗಳು ಪ್ರಾರಂಭವಾಗುವ ನಿರೀಕ್ಷೆ ಇದೆ.

ಸೇತುವೆಯ ವೈಶಿಷ್ಟ್ಯಗಳು: ರೈಲ್ವೆ ವಿಕಾಸ್ ನಿಗಮ ಲಿಮಿಟೆಡ್ ಸುಮಾರು 531 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಈ ಸೇತುವೆ 2.10 ಕಿ.ಮೀ ಉದ್ದವಿದೆ. ಲಂಬವಾಗಿ ತೆರೆಯುವ ಸೀ ಬ್ರಿಡ್ಜ್



ಆಗಿದ್ದು, ಸಮುದ್ರದಲ್ಲಿ ಹಡಗುಗಳ ಚಲನೆಯನ್ನು ಗಮನದಲ್ಲಿಟ್ಟುಕೊಂಡು ಇದನ್ನು ವಿನ್ಯಾಸಗೊಳಿಸಲಾಗಿದೆ. ಈ ಸೇತುವೆಯನ್ನು 110 ವರ್ಷಗಳ ಹಿಂದೆ ಬ್ರಿಟಿಷರು ನಿರ್ಮಿಸಿದ ಹಳೆಯ ಸೇತುವೆಗೆ ಸಮಾನಾಂತರವಾಗಿ ನಿರ್ಮಿಸಲಾಗಿದೆ. ಪಾರಂಪರಿಕ ಹಳೆಯ ಸೇತುವೆಗಿಂತ ಭಿನ್ನವಾಗಿದ್ದು, 72.5 ಮೀಟರ್ ಉದ್ದದ ಸಂಪೂರ್ಣ ಗಿರ್ಡರ್ ಲಂಬವಾಗಿ ತೆರೆದುಕೊಂಡು ಹಡಗುಗಳು ಸಂಚರಿಸಲು ಅನುವು ಮಾಡಿಕೊಡುತ್ತದೆ. ಹಳೆಯ ಸೇತುವೆ ಎರಡೂ ಬದಿಗಳಲ್ಲಿರುವ ಗಿರ್ಡರ್‌ಗಳು ಚಿಟ್ಟೆಯ ರೆಕ್ಕೆಗಳಂತೆ ತೆರೆದುಕೊಳ್ಳುತ್ತಿದ್ದವು. 72.5 ಮೀಟರ್ ಉದ್ದ, 16 ಮೀಟರ್ ಅಗಲ ಹಾಗೂ 550 ಟನ್‌ತೂಕವಿರುವ ಲಿಫ್ಟ್ ಸ್ಪ್ಯಾನ್ ಸ್ವಯಂಚಾಲಿತವಾಗಿ 17 ಮೀಟರ್ ಎತ್ತರದವರೆಗೆ ತೆರೆದುಕೊಳ್ಳುತ್ತದೆ. ಇದರಲ್ಲಿ ಅಳವಡಿಸಿರುವ ತಾಂತ್ರಿಕ ಸಾಮರ್ಥ್ಯದಿಂದಾಗಿ ಈ ಸೇತುವೆ ಸ್ಪೇನ್‌ನ ಕೆಲವು ಸೇತುವೆಗಳಂತೆಯೇ ಕಾರ್ಯನಿರ್ವಹಿಸುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹೊಸ ಸೇತುವೆಯ ಮಹತ್ವ: ರಾಮೇಶ್ವರಂ ಹಿಂದೂಗಳಿಗೆ ಪ್ರಮುಖ ಯಾತ್ರಾ ಸ್ಥಳವಾಗಿದ್ದು, ಇದನ್ನು ನಾಲ್ಕು ಧಾಮಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ. ಇಲ್ಲಿಗೆ ದೇಶದ ಮೂಲೆ ಮೂಲೆಯಿಂದಲೂ ಭಕ್ತರು ಆಗಮಿಸುತ್ತಾರೆ. 1914ರಲ್ಲಿ ನಿರ್ಮಿಸಲಾದ ಹಳೆಯ ಪಂಬನ್ ಬ್ರಿಡ್ಜ್ ಅನ್ನು ತುಕ್ಕು ಹಿಡಿಯುವಿಕೆ ಹಾಗೂ ಭದ್ರತಾ ಕಾರಣಗಳಿಂದಾಗಿ 2022ರ ಡಿಸೆಂಬರ್‌ನಲ್ಲಿ ಮುಚ್ಚಲಾಯಿತು. ಈಗ ಹೊಸ ಪಂಬನ್ ರೈಲ್ವೆ ಸೇತುವೆಯ ನಿರ್ಮಾಣದಿಂದ ದಕ್ಷಿಣ ರಾಮೇಶ್ವರಂ ಪ್ರಯಾಣ ಇನ್ನಷ್ಟು ಸುಲಭವಾಗಲಿದೆ.

ಸೇತುವೆ ನಿರ್ಮಾಣ ಹಾಗೂ ಸಂಚಾರ ಕಾರ್ಯಾಚರಣೆಗಳು: ದಕ್ಷಿಣ ರೈಲ್ವೆಯ ಸೇಲಂ ವಿಭಾಗದ ಸಾರ್ವಜನಿಕ ಸಂಪರ್ಕ ಅಧಿಕಾರಿ ಮಾರಿಯಾ ಮೈಕೆಲ್ ಅವರು ಮಾಹಿತಿ ನೀಡಿ, "ಹೊಸ ಪಂಬನ್ ಸೇತುವೆ 2024 ನವೆಂಬರ್?ನಲ್ಲಿ ಪೂರ್ಣಗೊಂಡಿದೆ. ಪ್ರಸ್ತುತ ಈ ಸೇತುವೆಯ ಸುರಕ್ಷತೆಗೆ ಸಂಬಂಧಿಸಿದ ಪರಿಶೀಲನೆಗಳು ಮತ್ತು ನಿಯತಾಂಕಗಳನ್ನು ಮೇಲ್ವಿಚಾರಣೆ ಮಾಡಲಾಗುತ್ತಿದೆ. ಈ ಸೇತುವೆಯ ಮೇಲೆ ರೈಲುಗಳು ಗಂಟೆಗೆ 75 ಕಿ.ಮೀ ವೇಗದಲ್ಲಿ ಚಲಿಸುತ್ತವೆ. ಇದರಲ್ಲಿ ಎರಡು ರೈಲು ಹಳಿಗಳನ್ನು ಹಾಕಲಾಗಿದ್ದು, ರೈಲುಗಳ ಸಂಚಾರವಿಲ್ಲದಿದ್ದಾಗ ಸಮುದ್ರದಲ್ಲಿ ಹಡಗುಗಗಳ ಸಂಚಾರ ಮುಂದುವರಿಸಲು ಸೇತುವೆಯ ಸ್ಲ್ಯಾಬ್ ಅನ್ನು ಮೇಲಕ್ಕೆತ್ತಲಾಗುತ್ತದೆ" ಎಂದು ತಿಳಿಸಿದರು.

ಹೊಸ ಲಂಬವಾಗಿ ತೆರೆಯುವ ಸೀ ಬ್ರಿಡ್ಜ್ ಭಾರತೀಯ ರೈಲ್ವೆ ಜಾಲದಲ್ಲಿ ಹೊಸ ಮೈಲಿಗಲ್ಲಾಗಿದ್ದು, ಧಾರ್ಮಿಕ ಯಾತ್ರೆಗೆ ಅನುಕೂಲವಾಗುವುದಲ್ಲದೆ, ಸಮುದ್ರ ಸಾರಿಗೆಗೆ ಒಂದು ಮಾದರಿಯಾಗಲಿದೆ.

# ಭಾರತ-ಇಸ್ರೇಲ್ ಮೈತ್ರಿ ಯೋಜನೆ




**ಜೆರುಸಲೇಂ:** ಭಾರತ -ಇಸ್ರೇಲ್ ಮೈತ್ರಿ ಯೋಜನೆಯಡಿಯಲ್ಲಿ ಭಾರತದಿಂದ ಮೊದಲ ಗಣ್ಯ ವ್ಯಕ್ತಿಗಳ ನಿಯೋಗ ಇಸ್ರೇಲ್‌ನ ಸರ್ಕಾರೇತರ ಸಂಸ್ಥೆ ಶರಕಾ ಮೂಲಕ ಈ ವಾರದ ಮೊದಲಲ್ಲಿ ಇಸ್ರೇಲ್?ಗೆ ಕರೆಸಿಕೊಂಡಿತ್ತು. ಇಸ್ರೇಲಿ ಸಮಾಜದ ಬಗೆಗಿನ ಭಾರತೀಯರ ಅಭಿಪ್ರಾಯ ಮತ್ತು ವಾಸ್ತವತೆಯನ್ನು ಅರಿಯಲು, ತಿಳಿವಳಿಕೆಯನ್ನು ಉತ್ತೇಜಿಸಲು ಈ ಯೋಜನೆ ಕೈಗೊಳ್ಳಲಾಗಿದೆ. ಈ ಮೂಲಕ ಭಾರತ-ಇಸ್ರೇಲ್ ಸಂಬಂಧವು ಮತ್ತಷ್ಟು ಬಲಗೊಳ್ಳಲು ಈ ಭೇಟಿ ಸಹಾಯವಾಗಲಿದೆ.

ಈ ಬಗ್ಗೆ ಶರಕಾದ ಅಧ್ಯಕ್ಷ ಮತ್ತು ಸಹ-ಸಂಸ್ಥಾಪಕ ಅಮಿತ್ ಡೆರಿ ಭಾರತದ ಗಣರಾಜ್ಯೋತ್ಸವದ ಭೇಟಿಯ ಆರಂಭದಲ್ಲಿ ಹೇಳಿದ್ದರು. "ಈ ಭಾರತೀಯ ನಿಯೋಗವನ್ನು ಆತಿಥ್ಯ ವಹಿಸಲು ನಮಗೆ ಗೌರವವಿದೆ. ಇಸ್ರೇಲ್ ಭೇಟಿಯಿಂದ ಭಾರತೀಯರು ಪಡೆಯುವ ಜ್ಞಾನ ಮತ್ತು ಅನುಭವಗಳು ಭಾರತ ಮತ್ತು ಇಸ್ರೇಲ್ ಸಂಬಂಧಗಳ ಭವಿಷ್ಯಕ್ಕೆ ಅಡಿಪಾಯ ಹಾಕುತ್ತವೆ. ಭಾರತದಿಂದ ಬಂದಿರುವ ಮುಸ್ಲಿಂ, ಹಿಂದೂ ಮತ್ತು ಕ್ರಿಶ್ಚಿಯನ್ ನಾಯಕರ ನಿಯೋಗವನ್ನು ಇಸ್ರೇಲ್‌ನಲ್ಲಿ ಸ್ವಾಗತಿಸಲು ನಾವು ಉತ್ಸುಕರಾಗಿದ್ದೇವೆ. ಇಸ್ರೇಲ್ ಮೇಲೆ ಭಾರತೀಯರು ಸಾಮಾನ್ಯ ಒಲವು ಹೊಂದಿದ್ದಾರೆ. ಅಲ್ಲದೇ ನಮ್ಮ ಸಮಾಜವು ಕೂಡ ಭಾರತೀಯರೊಂದಿಗೆ ಪರಸ್ಪರ ಆಳವಾಗಿ ಪರಿಚಿತವಾಗಿಲ್ಲ. ಆದರೆ, ಈಗಿನ ಭಾರತ-ಇಸ್ರೇಲ್ ಮೈತ್ರಿ ಯೋಜನೆಯು ವಿಶ್ವದ ಅತಿದೊಡ್ಡ ಮುಸ್ಲಿಂ ಸಮುದಾಯ ಹಾಗೂ ಅತಿದೊಡ್ಡ ಪ್ರಜಾಪ್ರಭುತ್ವದೊಂದಿಗೆ ಸಂಬಂಧವನ್ನು ನಿರ್ಮಿಸಲು ಅವಕಾಶವನ್ನು ಒದಗಿಸುತ್ತಿದೆ" ಎಂದಿದ್ದರು.

ಭಾರತೀಯ ಗಣ್ಯರ ನಿಯೋಗಕ್ಕೆ ಒಟ್ಟು ಆರು ದಿನಗಳ ಭೇಟಿ ಇದಾಗಿದ್ದು, ಜನವರಿ 31ರಂದು ಮುಕ್ತಾಯಗೊಂಡಿದೆ. ಈ ಪ್ರವಾಸದ ವೇಳೆ ಭಾರತದ ನಿಯೋಗವು ಜೆರುಸಲೆಮ್‌ನ ಐತಿಹಾಸಿಕ ಪವಿತ್ರ ಸ್ಥಳಗಳಿಗೆ ಭೇಟಿ ನೀಡಿದೆ. ತಜ್ಞರು ಮತ್ತು ವೈವಿಧ್ಯಮಯ ಸಮುದಾಯ ನಾಯಕರನ್ನು ಭೇಟಿ ಮಾಡಿದ್ದು, ಇಸ್ರೇಲಿ ಅರಬ್ಬರೊಂದಿಗೆ ಸಂವಾದ ನಡೆಸಿದೆ. ಮತ್ತು ಸ್ಥಳೀಯ ಶಿಕ್ಷಣ ತಜ್ಞರು ಮತ್ತು ಸಾರ್ವಜನಿಕ ನೀತಿ ಬುದ್ಧಿಜೀವಿಗಳೊಂದಿಗೆ ಸಂಪರ್ಕ ಸಾಧಿಸಿದೆ. ಅಕ್ಟೋಬರ್ 7, 2023 ರಂದು ಇಸ್ರೇಲ್ ಮೇಲೆ ಹಮಾಸ್ ನಡೆಸಿದ ದಾಳಿಯಿಂದ ಪ್ರಭಾವಿತವಾದ ಸ್ಥಳಗಳಲ್ಲೂ ಸಹ ಅವರು ಪ್ರವಾಸ ಮಾಡಿದ್ದಾರೆ. ಈ ದಾಳಿಯಲ್ಲಿ ಸುಮಾರು 1,200 ಜನರು ಸಾವನ್ನಪ್ಪಿದರು ಮತ್ತು 251 ಜನರನ್ನು ಹಮಾಸ್ ಒತ್ತೆಯಾಳುಗಳಾಗಿ ಇಟ್ಟುಕೊಂಡಿದೆ. ಅದರಲ್ಲಿ ಈಗ ಕೆಲವರನ್ನು ಬಿಡುಗಡೆ ಮಾಡಿದೆ.

"ನಾನು ನೋವಾ ಉತ್ಸವ ಸ್ಥಳ ಮತ್ತು ಹಮಾಸ್ ಭಯೋತ್ಪಾದಕರು ನೂರಾರು ಅಮಾಯಕ ಇಸ್ರೇಲಿಗಳನ್ನು ಕೊಂದು ಒತ್ತೆಯಾಳುಗಳಾಗಿ ಇರಿಸಿಕೊಂಡಿದ್ದ ನಿರ್ ಓಜ್ ಕಿಬ್ಬುಟ್ಜ್‌ಗೆ ಹೋಗಿದ್ದೆ. ಭಯೋತ್ಪಾದನೆ ಮತ್ತು ಅದರ ಪರಿಣಾಮಗಳನ್ನು ನಾನು ಎಂದಿಗೂ ಹತ್ತಿರದಿಂದ ನೋಡಿಲ್ಲ. ಒಬ್ಬ ಮುಸ್ಲಿಂ ಆಗಿ, ಅದು ನಮ್ಮ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವುದಕ್ಕೆ ನನಗೆ ನಾಚಿಕೆಯಾಗುತ್ತದೆ" ಎಂದು ಭಾರತದ ನಿಯೋಗದಲ್ಲಿದ್ದ ಸುಪ್ರೀಂ ಕೋರ್ಟ್ ವಕೀಲ ಮತ್ತು ರಾಷ್ಟ್ರ ಜಾಗರಣ್ ಅಭಿಯಾನದ ಸ್ಥಾಪಕ ಮತ್ತು ರಾಷ್ಟ್ರೀಯ ಸಂಚಾಲಕ ಸುಬುಹಿ ಖಾನ್ ಅನುಭವ ಹಂಚಿಕೊಂಡಿದ್ದಾರೆ.

# ಫೆ.2ರಂದು ಡಾ.ಎಚ್.ಎನ್ ಜನ್ಮಶತಮಾನೋತ್ಸವ ಶಾಲೆ ಶತಮಾನೋತ್ಸವ: ಸಿಎಂ ಉದ್ಘಾಟನೆ

ವರದಿ: ಮುಬಷೀರ್ ಅಹಮದ್

**ಚಿಕ್ಕಬಳ್ಳಾಪುರ:** ಪದ್ಮಭೂಷಣ ಡಾ.ಎಚ್. ನರಸಿಂಹಯ್ಯ ಅವರ ಹುಟ್ಟೂರಾದ ಹೊಸೂರು ಗ್ರಾಮ, ಇದೀಗ ಜೋಡಿ ಶತಮಾ ನೋತ್ಸವಗಳ ಸಂಭ್ರಮಾಚರಣೆಗೆ ಸಜ್ಜಾಗಿದೆ. 1920ರಲ್ಲಿ ಜನಸಿದ ಡಾ.ಎಚ್.ನರಸಿಂಹಯ್ಯ ಅವರ ಜನ್ಮಶತಮಾನೋತ್ಸವ ಮತ್ತು ಡಾ.ಎಚ್.ಎನ್ ಓದಿದ ಸರಕಾರಿ ಶಾಲೆಯ ಶತಮಾನೋತ್ಸವ ಕಾರ್ಯಕ್ರಮ ಎರಡೂ ಒಂದೇ ವೇದಿಕೆಯಲ್ಲಿ ನಡೆಯುತ್ತಿದ್ದು, ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲೂಕಿನ ಹೊಸೂರು ಗ್ರಾಮಕ್ಕೆ ಇದೀಗ ಸಂಭ್ರಮ ಮನೆ ಮಾಡಿದೆ. ಆಶ್ಚರ್ಯವೆಂಬಂತೆ 1920ರಲ್ಲೇ ಆರಂಭವಾಗಿರುವ ಸರಕಾರಿ ಮಾ.ಹಿ.ಪ್ರಾಥಮಿಕ ಶಾಲೆಗೆ 2020ಕ್ಕೆ ನೂರು ವರ್ಷಗಳು ಮಾ.ಹಿ.ಪ್ರಾಥಮಿಕ ಶಾಲೆಗೆ 2020ಕ್ಕೆ ನೂರು ವರ್ಷಗಳು ಪೂರೈಕೆಯಾಗಿದ್ದು,ಅದೇ ವರ್ಷದಲ್ಲಿ ಜನಿಸಿರುವಡಾ.ಎಚ್.ನರಸಿಂಹಯ್ಯ ಅವರಿಗೂ ನೂರು ವರ್ಷಗಳು ತುಂಬುತ್ತದೆ. ಆದ್ದರಿಂದಲೇ, ಜೋಡಿ ಶತಮಾನೋತ್ಸವ ಸಮಾರಂಭ ಒಂದೇ ವೇದಿಕೆಯಲ್ಲಿ ನಡೆಯುತ್ತಿದೆ.

ಪ್ರಸ್ತುತ ಈ ಶಾಲೆಯಲ್ಲಿ 200ಕ್ಕೂ ಅಧಿಕ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಇಲ್ಲಿ ಓದಿದ ನೂರಾರು






ವಿದ್ಯಾರ್ಥಿಗಳು ದೇಶ ವಿದೇಶಗಳಲ್ಲಿ ಉನ್ನತ ಹುದ್ದೆಗಳಲ್ಲಿದ್ದಾರೆ. ಹಿರಿಯ ವಿದ್ಯಾರ್ಥಿಗಳೆಲ್ಲರೂ ಒಗ್ಗೂಡಿ ಸಂಘ ಕಟ್ಟಿಕೊಂಡು ಶಾಲೆಯ ಅಭಿವೃದ್ಧಿಗೆ ಮುಂದಾಗಿರುವುದು ಮಾದರಿಯುತ ನಡೆಯಾಗಿದೆ.

ಹೊಸೂರಿನ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದ ಡಾ.ಎಚ್.ನರಸಿಂಹಯ್ಯ ಅವರು ಪ್ರಾಂಶುಪಾಲರಾಗಿ, ಬೆಂಗಳೂರು ವಿವಿಯ ಉಪಕುಲಪತಿಗಳಾಗಿಯೂ ಶಿಕ್ಷಣ ಕ್ಷೇತ್ರದಲ್ಲಿ ಅಗಣ್ಯಸೇವೆ ಸಲ್ಲಿಸಿದ್ದಾರೆ. ಇವರ ಸೇವೆಯನ್ನು ಗುರುತಿಸಿ ಭಾರತ ಸರಕಾರ ಪದ್ಮಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

**ಕೋವಿಡ್ ಕಾರಣಕ್ಕೆ ಮುಂದೂಡಿದ್ದ ಸಮಾರಂಭ:** 2020ರಲ್ಲೇ ನಡೆಯಬೇಕಿದ್ದ ಶತಮಾನೋತ್ಸವ ಸಮಾರಂಭವು ಕೋವಿಡ್ ಕಾರಣದಿಂದ ಮುಂದೂಡಲ್ಪಟ್ಟಿತ್ತು. ಶಾಲೆಯ ಹಿರಿಯ ವಿದ್ಯಾರ್ಥಿಗಳ ಸಂಘದ ಆಶಯದಂತೆ ಇದೀಗ ಮತ್ತೆ ಶುಭ ಮುಹೂರ್ತ ಕೂಡಿ ಬಂದಿದ್ದು ಜೋಡಿ ಶತಮಾನೋತ್ಸವಕ್ಕೆ ಸಕಲ ತಯಾರಿಗಳು ನಡೆಯುತ್ತಿವೆ.

**ಸಿಎಂ ಸಿದ್ದರಾಮಯ್ಯ ಚಾಲನೆ:** ಫೆ.2ರಂದು ಡಾ.ಎಚ್.ಎನ್ ಅವರು ಓದಿದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಅವರ ಜನ್ಮಶತಮಾನೋತ್ಸವ ಕಾರ್ಯಕ್ರಮ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಗೌರಿಬಿದನೂರು ಶಾಸಕ ಕೆ.ಎಚ್.ಪುಟ್ಟಸ್ವಾಮಿಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು,ನಾಡೋಜ ಡಾ.ಹಂಪ ನಾಗರಾಜಯ್ಯ ಮುಖ್ಯ ಭಾಷಣ ಮಾಡಲಿದ್ದಾರೆ. ಶತಮಾನೋತ್ಸವ ಸಮಾರಂಭದಲ್ಲಿ 10 ಸಾವಿರ ಜನರಿಗೆ ಆಸನ ವ್ಯವಸ್ಥೆ ಮಾಡಲಾಗಿದ್ದು, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಸಚಿವ ಮಧು ಬಂಗಾರಪ್ಪ ಸೇರಿದಂತೆ ವಿವಿಧ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

# ಅಮೆರಿಕದಲ್ಲಿ ಮತ್ತೊಂದು ವಿಮಾನ ಅಪಘಾತ



**ಫಿಲಡೆಲ್ಫಿಯಾ:** ಅಮೆರಿಕದಲ್ಲಿ ಮತ್ತೊಂದು ವಿಮಾನ ಅಪಘಾತ ಸಂಭವಿಸಿದೆ. ಫಿಲಡೆಲ್ಫಿಯಾದಲ್ಲಿ ಸಣ್ಣ ವಿಮಾನವೊಂದು ಟೇಕಾಫ್ ಆದ ಕೆಲವೇ ಸಮಯದಲ್ಲಿ ಪತನಗೊಂಡಿದೆ. ಶಾಪಿಂಗ್ ಮಾಲ್ ಬಳಿ ವಿಮಾನ ಪತನಗೊಂಡಿದ್ದು, ಭಾರೀ ಬೆಂಕಿ ಹೊತ್ತಿಕೊಂಡಿದೆ.

ಅಪಘಾತದ ಪ್ರದೇಶದಲ್ಲಿ ಮನೆಗಳು ಮತ್ತು ಕಾರುಗಳು ಸುಟ್ಟು ಭಸ್ಮವಾಗಿವೆ. ಮಾಹಿತಿ ತಿಳಿದ ತಕ್ಷಣ ಪೊಲೀಸರು ಮತ್ತು ಅಗ್ನಿಶಾಮಕ ಸಿಬ್ಬಂದಿ ಹೆಚ್ಚಿನ ಸಂಖ್ಯೆಯಲ್ಲಿ ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ನಡೆಸಿದೆ. ಈ ಘಟನೆಯಲ್ಲಿ ಹಲವರು ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ. ಪೆನ್ಸಿಲ್ವೇನಿಯಾದ ಗವರ್ನರ್ ಜೋಶ್ ಶಾಪಿರೋ ಇದನ್ನು ದೃಢಪಡಿಸಿದ್ದಾರೆ. ರಕ್ಷಣಾ ಕಾರ್ಯಾಚರಣೆ ಕೈಗೊಳ್ಳಲಾಗಿದೆ ಎಂದು ಅವರು ತಿಳಿಸಿದ್ದಾರೆ. ವಿಮಾನ ನಿಲ್ದಾಣದಿಂದ 6:06 ರಿ.ಟ. ಕ್ಕೆ ಸಣ್ಣ ಜೆಟ್ ಟೇಕ್ ಆಫ್ ಆಗಿದೆ. ಅಲ್ಲಿಂದ 1,600 ಅಡಿ (487 ಮೀಟರ್) ಎತ್ತರಕ್ಕೆ ಏರಿದ ಬಳಿಕ ಸುಮಾರು 30 ಸೆಕೆಂಡುಗಳ ನಂತರ ರಾಡಾರ್‌ನಿಂದ ವಿಮಾನ ಕಣ್ಮರೆಯಾಗಿದೆ ಎಂದು ತಿಳಿದು ಬಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಹಮಾಸ್‌ನಿಂದ ಶನಿವಾರ ಮತ್ತೆ 3 ಒತ್ತೆಯಾಳುಗಳ ಬಿಡುಗಡೆ

**ಜೆರುಸಲೇಂ:** ಹಮಾಸ್ ಶನಿವಾರ ಬಿಡುಗಡೆ ಮಾಡಲಿರುವ ಮೂವರು ಇಸ್ರೇಲಿ ನಾಗರಿಕ ಒತ್ತೆಯಾಳುಗಳ ಪಟ್ಟಿಯು ಇಸ್ರೇಲ್?ಗೆ ತಲುಪಿದೆ ಎಂದು ಇಸ್ರೇಲ್ ಪ್ರಧಾನಿ ಕಚೇರಿ ಶುಕ್ರವಾರ ತಿಳಿಸಿದೆ. ಈ ಪಟ್ಟಿಯಲ್ಲಿ ಇಸ್ರೇಲಿ-ಫ್ರೆಂಚ್ ಪ್ರಜೆ ಒಫರ್ ಕಾಲ್ಡೆರಾನ್ (54), ಇಸ್ರೇಲಿ-ಅಮೆರಿಕನ್ ಪ್ರಜೆ ಕೀತ್ ಸೀಗಲ್ (65) ಮತ್ತು ಇಸ್ರೇಲಿ ನಾಗರಿಕ ಯಾರ್ಡೆನ್ ಬಿಬಾಸ್ (35) ಸೇರಿದ್ದಾರೆ.

ಬೀಬಾಸ್ ಅವರ ಅವರ ಪತ್ನಿ ಶಿರಿ ಮತ್ತು ಇಬ್ಬರು ಪುತ್ರರಾದ ಐದು ವರ್ಷದ ಏರಿಯಲ್ ಮತ್ತು ಎರಡು ವರ್ಷದ ಕಾಫಿರ್ ಅವರನ್ನು ಕೂಡ ಅಕ್ಟೋಬರ್ 7, 2023 ರ ದಾಳಿಯಲ್ಲಿ ಹಮಾಸ್ ಒತ್ತೆಯಾಳಾಗಿ ಗಾಜಾಗೆ ಅಪಹರಿಸಿಕೊಂಡು ಹೋಗಿತ್ತು. ಆದರೆ ಇವರು ಇನ್ನೂ ಬದುಕಿದ್ದಾರಾ ಎಂಬ ಬಗ್ಗೆ ಯಾವುದೇ ಅಧಿಕೃತ ಮಾಹಿತಿಗಳು ತಿಳಿದಿಲ್ಲ.

ಜನವರಿ 19 ರಿಂದ ಜಾರಿಗೆ ಬಂದ ಇಸ್ರೇಲ್ ಮತ್ತು ಹಮಾಸ್ ನಡುವಿನ ಒತ್ತೆಯಾಳುಗಳ ಬಿಡುಗಡೆಯ ಗಾಜಾ



ಕದನ ವಿರಾಮ ಒಪ್ಪಂದದ ಪ್ರಕಾರ ಮೂವರು ಇಸ್ರೇಲಿ ಒತ್ತೆಯಾಳುಗಳನ್ನು ಶನಿವಾರ ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ.

ಆರು ವಾರಗಳ ಕದನ ವಿರಾಮ ಒಪ್ಪಂದದ ಮೊದಲ ಹಂತ ಪ್ರಾರಂಭವಾದಾಗಿನಿಂದ, ಐವರು ಇಸ್ರೇಲಿ ನಾಗರಿಕರು, ಐವರು ಮಹಿಳಾ ಇಸ್ರೇಲಿ ಸೈನಿಕರು ಮತ್ತು ಐವರು ಥಾಯ್ ಪ್ರಜೆಗಳನ್ನು ಬಿಡುಗಡೆ ಮಾಡಲಾಗಿದೆ. ಮೊದಲ ಹಂತದಲ್ಲಿ ಗಾಜಾದಲ್ಲಿರುವ ಒಟ್ಟು 33 ಇಸ್ರೇಲಿ ಒತ್ತೆಯಾಳುಗಳು ಮತ್ತು ಇಸ್ರೇಲಿ ಜೈಲುಗಳಿಂದ ಸುಮಾರು 2,000 ಪ್ಯಾಲೆಸ್ಟೈನಿಯರನ್ನು ಬಿಡುಗಡೆ ಮಾಡುವ ಪ್ರಸ್ತಾಪವಿದೆ.

ಏತನ್ಮಧ್ಯೆ, ವೆಸ್ಟ್ ಬ್ಯಾಂಕ್‌ನ ಉತ್ತರ ದಿಕ್ಕಿನಲ್ಲಿರುವ ಜೆನಿನ್‌ನಲ್ಲಿ ಇಬ್ಬರು ಪ್ಯಾಲೆಸ್ಟೈನ್ ಉಗ್ರರನ್ನು ಕೊಂದಿರುವುದಾಗಿ ಇಸ್ರೇಲ್ ರಕ್ಷಣಾ ಪಡೆಗಳು (ಐಡಿಎಫ್) ಮತ್ತು ಇಸ್ರೇಲ್ ಭದ್ರತಾ ಸಂಸ್ಥೆ (ಐಎಸ್‌ಎ) ಶುಕ್ರವಾರ ಜಂಟಿ ಹೇಳಿಕೆಯಲ್ಲಿ ತಿಳಿಸಿವೆ. ಗುರುವಾರ ಐಎಸ್‌ಎ ಜೊತೆಗೆ ಜಂಟಿ ಕಾರ್ಯಾಚರಣೆ ನಡೆಸಿದ ಐಡಿಎಫ್ ಮತ್ತು ಹೆಚ್ಚುವರಿ ಪಡೆಗಳು ಕಟ್ಟಡವನ್ನು ಸುತ್ತುವರಿದು ಒಳಗಿದ್ದ ಇಬ್ಬರು ಉಗ್ರರನ್ನು ಕೊಂದು ಹಾಕಿವೆ.

ಐಡಿಎಫ್ ಸೈನಿಕರು ಇಬ್ಬರು ಉಗ್ರರನ್ನು ಕೊಲ್ಲುವ ಮೊದಲು ತೀವ್ರ ಗುಂಡಿನ ಚಕಮಕಿ ನಡೆದಿದ್ದು, ಈ ಹೋರಾಟದಲ್ಲಿ ಓರ್ವ ಇಸ್ರೇಲಿ ಸೈನಿಕ ಸಾವನ್ನಪ್ಪಿದ್ದು, ಇತರ ಐದು ಜನ ಗಾಯಗೊಂಡಿದ್ದಾರೆ.

ಜನವರಿ 21 ರಿಂದ ಐಡಿಎಫ್, ಐಎಸ್‌ಎ ಮತ್ತು ಇಸ್ರೇಲ್ ಬಾರ್ಡರ್ ಪೊಲೀಸರು ಆಕ್ರಮಿತ ಪ್ರದೇಶದಲ್ಲಿನ ಭಯೋತ್ಪಾದಕರ ಗುಂಪುಗಳನ್ನು ನಿರ್ಮೂಲನೆ ಮಾಡಲು ವೆಸ್ಟ್ ಬ್ಯಾಂಕ್‌ನ ಜೆನಿನ್ ಮತ್ತು ತುಲ್ಕರ್ಮ್‌ನಲ್ಲಿ 'ಐರನ್ ವಾಲ್' ಹೆಸರಿನ ಮಿಲಿಟರಿ ಅಭಿಯಾನವನ್ನು ನಡೆಸುತ್ತಿದ್ದಾರೆ. ಕಾರ್ಯಾಚರಣೆಯಲ್ಲಿ ಡಜನ್‌ಗಟ್ಟಲೆ ಪ್ಯಾಲೆಸ್ಟೈನ್ ಉಗ್ರಗಾಮಿಗಳು ಕೊಲ್ಲಲ್ಪಟ್ಟಿದ್ದು, ಹಲವಾರು ಜನ ಗಾಯಗೊಂಡಿದ್ದಾರೆ. ಅಲ್ಲದೆ ಹಲವಾರು ಕಟ್ಟಡಗಳನ್ನು ನೆಲಸಮಗೊಳಿಸಲಾಗಿದೆ.

# ಸೇಲಂ: ಟ್ರಕ್‌ನಲ್ಲಿಟ್ಟಿದ್ದ ಗ್ಯಾಸ್ ಸಿಲಿಂಡರ್ ಸ್ಫೋಟ

**ಸೇಲಂ:** ತಮಿಳುನಾಡಿನ ಸೇಲಂನ ಹೆದ್ದಾರಿಯಲ್ಲಿ ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡ ಘಟನೆ ನಡೆದಿದೆ. ಈ ಘಟನೆಯಲ್ಲಿ ಯುವಕ ಮತ್ತು ಇತರ ಪ್ರೇಕ್ಷಕರು ಪವಾಡಸದೃಶವಾಗಿ ಸಾವಿನಿಂದ ಪಾರಾಗಿದ್ದಾರೆ. ನಾಲ್ಕು ಪಥದ ರಸ್ತೆ ನಿರ್ಮಾಣದ ಸಮಯದಲ್ಲಿ ಚಿನ್ನಪ್ಪಂಪಟ್ಟಿಯಲ್ಲಿ ಈ ಘಟನೆ ಸಂಭವಿಸಿದೆ. ಈ ಘಟನೆಯ ಭಯಾನಕ ದೃಶ್ಯಗಳು ಆನ್‌ಲೈನ್‌ನಲ್ಲಿ ಕಾಣಿಸಿಕೊಂಡಿದೆ. ಸ್ಫೋಟದ ಸಮಯದಲ್ಲಿ ಟ್ರಕ್ ಬಳಿ ಯಾವುದೇ ವಾಹನ ಇಲ್ಲದಿರುವುದರಿಂದ ದೊಡ್ಡ ಅಪಘಾತ ತಪ್ಪಿತು. ಓರ್ವ ಯುವಕನಿಗೆ ಸುಟ್ಟ ಗಾಯಗಳಾಗಿವೆ.



# ಸೆನ್ಸೇಷನಲ್ ನಿರ್ದೇಶಕರ ಜೊತೆ ಸಿನಿಮಾ



ರಾಮ್ ಚರಣ್ ಹೊಸ ಸಿನಿಮಾಗಳ ಬಗ್ಗೆ ಕೆಲವು ದಿನಗಳಿಂದ ನಾನಾ ಸುದ್ದಿಗಳು ಹರಿದಾಡುತ್ತಿವೆ. ಅವರ ಜೊತೆ ಸಿನಿಮಾ ಮಾಡೋಕೆ ನಿರ್ದೇಶಕರು ಸಾಲುಗಟ್ಟಿ ನಿಂತಿದ್ದಾರಂತೆ. ಹಲವು ಕ್ರೇಜಿ ಡೈರೆಕ್ಟರ್ ಹೆಸರುಗಳು ಕೇಳಿಬಂದಿವೆ.
ಆದರೆ ಈ ಸುದ್ದಿಯಲ್ಲಿ ಯಾವುದೇ ಹುರುಳಿಲ್ಲ ಅಂತ ಚಿತ್ರತಂಡ ಸ್ಪಷ್ಟಪಡಿಸಿದೆ. ದಿಲ್ ರಾಜು ನಿರ್ಮಾಣದಲ್ಲಿ ಸಿನಿಮಾ ಮಾಡ್ತಾರೆ ಅನ್ನೋದು ಸುಳ್ಳು ಸುದ್ದಿ ಅಂತ ಹೇಳಿದ್ದಾರೆ. ಇತರ ನಿರ್ದೇಶಕರ ಬಗ್ಗೆಯೂ ಸ್ಪಷ್ಟನೆ ನೀಡಿದ್ದಾರೆ. ಈಗ ಮತ್ತೊಬ್ಬ ಕ್ರೇಜಿ ಡೈರೆಕ್ಟರ್ ಹೆಸರು ಕೇಳಿಬರ್ತಿದೆ. ರಾಮ್ ಚರಣ್ ಒಬ್ಬ ಸೆನ್ಸೇಷನಲ್ ಡೈರೆಕ್ಟರ್ ಜೊತೆ ಸಿನಿಮಾ ಮಾಡ್ತಾರಂತೆ. ಅದು ಯಾರೂ ಅಲ್ಲ, ಸಂದೀಪ್ ರೆಡ್ಡಿ ವಂಗ. ಅರ್ಜುನ್ ರೆಡ್ಡಿ, ಅನಿಮಲ್ ಸಿನಿಮಾಗಳಿಂದ ಸೆನ್ಸೇಷನ್ ಕ್ರಿಯೇಟ್ ಮಾಡಿದ್ದ ಸಂದೀಪ್, ಚರಣ್‌ಗೆ ಕಥೆ ಹೇಳಿದ್ದಾರಂತೆ.
ಕೆಲವು ಕಾಲದಿಂದ ಸಂದೀಪ್ ರೆಡ್ಡಿ ವಂಗ ಮೆಗಾ ಫ್ಯಾಮಿಲಿ ಜೊತೆ ಓಡಾಡ್ತಿದ್ದಾರೆ. ಚಿರಂಜೀವಿ, ರಾಮ್ ಚರಣ್ ಜೊತೆ ಚರ್ಚೆ ನಡೆಸಿದ್ದಾರೆ ಅನ್ನೋ ಸುದ್ದಿಯೂ ಇದೆ. ಹಾಗಾಗಿ ಈ ವದಂತಿಯಲ್ಲಿ ಹುರುಳಿಲ್ಲ. ಈಗ ಸಂದೀಪ್ ರೆಡ್ಡಿ ವಂಗ ಕೈಯಲ್ಲಿ ಎರಡು ಸಿನಿಮಾಗಳಿವೆ. ಮೊದಲು ಪ್ರಭಾಸ್ ಜೊತೆ ಸ್ಪಿರಿಟ್ ಸಿನಿಮಾ ಮಾಡಬೇಕಿದೆ. ಮೇ ತಿಂಗಳಿನಿಂದ ಶುರುವಾಗುತ್ತೆ ಅಂತ ಕೇಳಿಬರ್ತಿದೆ. ಇಲ್ಲ ಅಂದ್ರೆ ವರ್ಷದ ದ್ವಿತೀಯಾರ್ಧದಲ್ಲಿ ಶುರುವಾಗಬಹುದು. ಇದಾದ ಮೇಲೆ ಅಲ್ಲು ಅರ್ಜುನ್ ಜೊತೆ ಒಂದು ಸಿನಿಮಾ ಮಾಡೋ ಕಮಿಟ್ಮೆಂಟ್ ಇದೆ

# ಫೈನಲ್‌ಗೆ ಭಾರತ

ಕೌಲಾಲಂಪುರ: ಅಂಡರ್–19 ಮಹಿಳಾ ಟಿ20 ವಿಶ್ವಕಪ್ ಫೈನಲ್‌ಗೆ ಹಾಲಿ ಚಾಂಪಿಯನ್ ಭಾರತ ಲಗ್ಗೆಯಿಟ್ಟಿದೆ. ಶುಕ್ರವಾರ ನಡೆದ 2ನೇ ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ವಿರುದ್ಧ 9 ವಿಕೆಟ್‌ಗಳ ಭರ್ಜರಿ ಗೆಲುವು ಸಾಧಿಸಿತು. ಭಾನುವಾರ ಫೈನಲ್ ನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಆಡಲಿರುವ ಭಾರತ, ಸತತ 2ನೇ ವಿಶ್ವಕಪ್ ಟ್ರೋಫಿ ಜಯಿಸುವ ಗುರಿ ಹೊಂದಿದೆ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಇಂಗ್ಲೆಂಡ್ 20 ಓವರಲ್ಲಿ 8 ವಿಕೆಟ್ ನಷ್ಟಕ್ಕೆ 113 ರನ್ ಗಳಿಸಿತು. ಇಂಗ್ಲೆಂಡ್ ಬ್ಯಾಟರ್‌ಗಳು ಭಾರತೀಯ ಸ್ಪಿನ್ನರ್‌ಗಳ ಎದುರು ಸ್ವೀಪ್ ಹಾಗೂ ಪ್ಯಾಡಲ್ ಸ್ವೀಪ್‌ಗಳನ್ನು ಮಾಡಲು ಹಿಂದೇಟು ಹಾಕಿದರು. ಇದರ ಪರಿಣಾಮ ಐವರು ಬೌಲ್ಡ್ ಆಗಿ ವಿಕೆಟ್ ಕಳೆದುಕೊಳ್ಳಬೇಕಾಯಿತು. ಆರಂಭಿಕ ಆಟಗಾರ್ತಿ ದವಿನಾ ಪೆರ್ರಿನ್ 45, ನಾಯಕಿ ಬಿ ನೊರ್ಗ್‌ರೊವ್ 30 ರನ್ ಗಳಿಸಿದರು. ಭಾರತ ಪರ ಸ್ಪಿನ್ನರ್‌ಗಳಾದ ಪಾರುಣಿಕಾ ಸಿಸೋಡಿಯಾ ಹಾಗೂ ವೈಷ್ಣವಿ ತಲಾ 3, ಆಯುಷಿ ಶುಕ್ಲಾ 2 ವಿಕೆಟ್ ಕಿತ್ತರು. ಸುಲಭ ಗುರಿ ಬೆನ್ನತ್ತಿದ ಭಾರತಕ್ಕೆ ತ್ರಿಶಾ ಹಾಗೂ ಜಿ. ಕಮಲಿನಿ ಮೊದಲ ವಿಕೆಟ್‌ಗೆ 60 ರನ್ ಜೊತೆಯಾಟ ನೀಡಿದರು. ತ್ರಿಶಾ 35 ರನ್ ಗಳಿಸಿ ಔಟಾದರೂ, ಕಮಲಿನಿ ಅರ್ಧಶತಕ ಸಿಡಿಸಿ ಇನ್ನೂ 5 ಓವರ್ ಬಾಕಿ ಇರುವಂತೆಯೇ ತಂಡವನ್ನು ಜಯದ ದಡ ಸೇರಿಸಿದರು. 50 ಎಸೆತದಲ್ಲಿ 56 ರನ್ ಗಳಿಸಿ ಕಮಲಿನಿ ಔಟಾಗದೆ ಉಳಿದರು.

# 5 ತಿಂಗಳ ಬಳಿಕ ಸ್ಫೋಟಕ ಬ್ಯಾಟರ್ ಎಂಟ್ರಿ


ಭಾರತ ಮತ್ತು ಇಂಗ್ಲೆಂಡ್ ನಡುವೆ 5 ಪಂದ್ಯಗಳ ಟಿ20 ಸರಣಿ ನಡೆಯುತ್ತಿದ್ದು ಉಭಯ ತಂಡಗಳು ನಾಲ್ಕನೇ ಪಂದ್ಯ ಆಡಲು ಸಜ್ಜಾಗಿವೆ.
ಪುಣೆಯ, ಮಹಾರಾಷ್ಟ್ರ ಕ್ರಿಕೆಟ್ ಅಸೋಸಿಯೇಷನ್ ಅಂತರಾಷ್ಟ್ರೀಯ ಕ್ರಿಕೆಟ್ ಮೈದಾನದಲ್ಲಿ ನಡೆಯಲಿರುವ ಈ ಪಂದ್ಯದಲ್ಲಿ ಟಾಸ್ ಗೆದ್ದಿರುವ ಇಂಗ್ಲೆಂಡ್ ನಾಯಕ ಮೊದಲಿಗೆ ಬೌಲಿಂಗ್ ಆಯ್ದುಕೊಂಡು ಭಾರತಕ್ಕೆ ಬ್ಯಾಟಿಂಗ್‌ಗೆ ಆಹ್ವಾನಿಸಿದ್ದಾರೆ. ಮೂರನೇ ಪಂದ್ಯದಲ್ಲಿ ಸೋಲನ್ನು ಕಂಡಿರುವ ಭಾರತ ಈ ಪಂದ್ಯದಲ್ಲಿ ಗೆದ್ದು ಸರಣಿ ಕೈವಶ ಮಾಡಿಕೊಳ್ಳಲು ಯೋಜನೆ ರೂಪಿಸಿಕೊಂಡಿದೆ. ಈ ಹಿನ್ನೆಲೆ ತಂಡದಲ್ಲಿ ಮೂರು ಬದಲಾವಣೆಯೊಂದಿಗೆ ಕಣಕ್ಕಿಳಿಯಲು ಸಜ್ಜಾಗಿದೆ.ಭಾರತದ ಪರ ಮೂರನೆ ಪಂದ್ಯದಲ್ಲಿ ಆಡಿದ್ದ ಧ್ರುವ್ ಜುರೇಲ್, ಮೊಹಮ್ಮದ ಶಮಿ, ವಾಷಿಂಗ್ಟನ್ ಸುಂದರ್ ಅವರನ್ನು 4ನೇ ಪಂದ್ಯದಿಂದ ಕೈಬಿಡಲಾಗಿದ್ದು ಇವರ ಸ್ಥಾನಕ್ಕೆ ರಿಂಕು ಸಿಂಗ್, ಶಿವಂ ದುಬೆ, ಅರ್ಷದೀಪ್ ಸಿಂಗ್ ಅವರನ್ನು ಆಯ್ಕೆ ಮಾಡಲಾಗಿದೆ. ಟೀಂ ಇಂಡಿಯಾದ ಮಾಧ್ಯಮ ಕ್ರಮಾಂಕದ ಬ್ಯಾಟರ್ ಆಗಿರುವ ಶಿವಂ ದುಬೆ ಐದು ತಿಂಗಳ ಬಳಿಕ ಟಿ20 ಅಂತರಾಷ್ಟ್ರೀಯ ಪಂದ್ಯಕ್ಕೆ ಪುನರಾಗಮನ ಮಾಡಿದ್ದಾರೆ.

# ಮಹೇಶ್‌ಬಾಬು ಇನ್ ಡೇಂಜರಸ್ ಪ್ಲೇಸ್!



ಸೂಪರ್ ಸ್ಟಾರ್ ಮಹೇಶ್ ಬಾಬು ಮತ್ತು ನಿರ್ದೇಶಕ ರಾಜಮೌಳಿ ಕಾಂಬಿನೇಷನ್‌ನಲ್ಲಿ ವಿಶ್ವದರ್ಜೆಯ ಸಿನಿಮಾ ಶುರುವಾಗಿದೆ. ರಾಜಮೌಳಿ ಸಾಮಾಜಿಕ ಜಾಲತಾಣದಲ್ಲಿ ಮಹೇಶ್ ಬಾಬುರವರ ಪಾಸ್‌ಪೋರ್ಟ್‌ನ್ನು ತಮ್ಮ ಬಳಿ ಇಟ್ಟುಕೊಂಡಿರುವ ಫೋಟೋ ಹಾಕುವ ಮೂಲಕ ಚಿತ್ರೀಕರಣ ಶುರುವಾಗಿರುವ ಸುಳಿವು ನೀಡಿದ್ದಾರೆ. ಮಹೇಶ್ ಬಾಬು ವಿದೇಶಕ್ಕೆ ಹೋಗದೆ ರಾಜಮೌಳಿ ಚಿತ್ರಕ್ಕೆ ಸಮಯ ಕೊಡಬೇಕು ಎಂದು ಅರ್ಥವಾಗಿದೆ.
ಈ ಚಿತ್ರದಲ್ಲಿ ಗ್ಲೋಬಲ್ ಬ್ಯೂಟಿ ಪ್ರಿಯಾಂಕ ಚೋಪ್ರಾ ನಾಯಕಿಯಾಗಿ ನಟಿಸುತ್ತಿದ್ದಾರೆ. ಇತ್ತೀಚೆಗೆ ಅವರು ಹೈದರಾಬಾದ್‌ಗೆ ಬಂದು ಚಿಲುಕೂರು ಬಾಲಾಜಿ ದೇವಸ್ಥಾನಕ್ಕೆ ಭೇಟಿ ನೀಡಿದ್ದರು. ಲಿಂಗಂಪಲ್ಲಿ ಬಳಿ ಇರುವ ಅಲ್ಯೂಮಿನಿಯಂ ಕಾರ್ಖಾನೆಯಲ್ಲಿ ಚಿತ್ರೀಕರಣ ನಡೆಯುತ್ತಿದೆ.
ಈ ಚಿತ್ರಕ್ಕೆ ರಾಜಮೌಳಿ ಕೆಲವು ಪ್ರಮುಖ ತಾಣಗಳನ್ನು ಆಯ್ಕೆ ಮಾಡಿದ್ದಾರೆ. ಈ ಚಿತ್ರ ಕಾಡಿನ ಹಿನ್ನೆಲೆಯಲ್ಲಿ ಸಾಹಸ ಚಿತ್ರವಾಗಿ ತಯಾರಾಗುತ್ತಿದೆ. ಈ ಚಿತ್ರದ ಕಥೆ ಆಫ್ರಿಕಾದ ಕಾಡುಗಳಿಂದ ಹುಟ್ಟಿಕೊಂಡಿದೆ.
ಆಫ್ರಿಕನ್ ಕಾದಂಬರಿಕಾರ ವಿಲ್ಬರ್ ಸ್ಮಿತ್ ಬರೆದ ಕೃತಿಯನ್ನು ಆಧರಿಸಿ ರಾಜಮೌಳಿ ಮತ್ತು ವಿಜಯೇಂದ್ರ ಪ್ರಸಾದ್ ಕಥೆಯನ್ನು ಸಿದ್ಧಪಡಿಸಿದ್ದಾರೆ.
ಹಾಗಾಗಿ ಕಾಡಿನ ತಾಣಗಳು ಚಿತ್ರೀಕರಣಕ್ಕೆ ಬಹಳ ಮುಖ್ಯ. ರಾಜಮೌಳಿ ಎರಡು ತಾಣಗಳನ್ನು ಅಂತಿಮಗೊಳಿಸಿದ್ದಾರೆ.
ಒಂದು ಕೀನ್ಯಾ ಕಾಡುಪ್ರದೇಶ ಮತ್ತು ಇನ್ನೊಂದು ಹೈದರಾಬಾದ್. ಈ ಎರಡೂ ತಾಣಗಳಲ್ಲಿ ಪ್ರಮುಖ ದೃಶ್ಯಗಳ ಚಿತ್ರೀಕರಣ ನಡೆಯಲಿದೆ. ಮಹೇಶ್ ಬಾಬು ಪಾಸ್‌ಪೋರ್ಟ್ ಇಟ್ಟುಕೊಂಡಿರುವ ರಾಜಮೌಳಿ ಕೀನ್ಯಾಗೆ ಹೋಗಲು ಮಹೇಶ್‌ಗೆ ವಾಪಸ್ ಕೊಡಲೇಬೇಕು ಅಂತ ನೆಟ್ಟಿಗರು ತಮಾಷೆಯಾಗಿ ಕಾಮೆಂಟ್ ಮಾಡುತ್ತಿದ್ದಾರೆ.
ಕೀನ್ಯಾ ಕಾಡುಗಳಲ್ಲಿ ಮಹೇಶ್ ಬಾಬು ಅನೇಕ ಆಕ್ಷನ್ ದೃಶ್ಯಗಳಲ್ಲಿ ಭಾಗವಹಿಸಬೇಕಾಗುತ್ತದೆ. ಕಾಡಿನ ದೃಶ್ಯಗಳು ಹಾಲಿವುಡ್‌ನಲ್ಲೂ ಕೂಡ ಹಿಂದೆಂದೂ ಕಾಣದಂತೆ ಇರುತ್ತವೆ.

# ಹಬ್ಬದ ಸೀಸನ್‌ಗೆ 'ಕೂಲಿ' ವೇಟಿಂಗ್!



ಸೂಪರ್ ಸ್ಟಾರ್ ರಜನಿಕಾಂತ್, 'ಜೈಲರ್' ಚಿತ್ರದ ಮೂಲಕ ಫಾರ್ಮ್‌ಗೆ ಮರಳಿದ್ದಾರೆ. ಹಲವು ಪ್ರಾಜೆಕ್ಟ್‌ಗಳಲ್ಲಿ ಬ್ಯುಸಿಯಾಗಿದ್ದಾರೆ. ಟಿ. ಜೆ. ಜ್ಞಾನವೇಲ್ ನಿರ್ದೇಶನದ 'ವೇಟ್ಟೈಯನ್' ಚಿತ್ರ ಹೆಚ್ಚು ಪ್ರಭಾವ ಬೀರಲಿಲ್ಲ. ಈಗ ಎಲ್ಲರ ಕಣ್ಣು 'ಕೂಲಿ' ಮೇಲಿದೆ.ಲೋಕೇಶ್ ಕನಕರಾಜ್ ನಿರ್ದೇಶನದ ಈ ಚಿತ್ರ ಚಿನ್ನ ಕಳ್ಳಸಾಗಣೆ ಸುತ್ತ ಸುತ್ತುತ್ತದೆ. ಚಿತ್ರದ ಬಿಡುಗಡೆಗಾಗಿ ಅಭಿಮಾನಿಗಳು ಕಾತರದಿಂದ ಕಾಯುತ್ತಿದ್ದಾರೆ.
ಮೊದಲಿಗೆ 'ಕೂಲಿ' ಮೇ ದಿನದಂದು ಬಿಡುಗಡೆಯಾಗಲಿದೆ ಎಂಬ ವರದಿಗಳು ಬಂದಿದ್ದವು. ಆದರೆ, ಕೂಲಿ ಚಿತ್ರದ ಕೆಲಸಗಳು ಇನ್ನೂ ಪೂರ್ಣಗೊಳ್ಳದ ಕಾರಣ ದೀಪಾವಳಿಗೆ ಬಿಡುಗಡೆ ದಿನಾಂಕವನ್ನು ಬದಲಾಯಿಸಲಾಗಿದೆ. ಹಬ್ಬದ ಸೀಸನ್ ನಲ್ಲಿ ಕಲೆಕ್ಷನ್ ಜಾಸ್ತಿ ಆಗಿರುವುದರಿಂದ ಚಿತ್ರತಂಡ ಈ ನಿರ್ಧಾರ ಕೈಗೊಂಡಿದೆಯಂತೆ. ರಜನಿಕಾಂತ್ ಆರೋಗ್ಯ ಸಮಸ್ಯೆಗಳಿಂದ ಶೂಟಿಂಗ್ ನಿಂತುಹೋಗಿತ್ತು. ಈಗ ಮತ್ತೆ ಶುರುವಾಗಿದೆ. ರಜನಿ ಚಿನ್ನದ ಕಳ್ಳಸಾಗಾಣೆದಾರನ ಪಾತ್ರದಲ್ಲಿ ನಟಿಸ್ತಿದ್ದಾರೆ.

# ನಾನಿ ವಿರುದ್ಧ ಪುಷ್ಕರ್ ಕಿಡಿ




ಪುಷ್ಕರ್ ಮಲ್ಲಿಕಾರ್ಜುನಯ್ಯ ಅವರು ಕನ್ನಡದಲ್ಲಿ ಹಲವು ಹಿಟ್ ಸಿನಿಮಾಗಳನ್ನು ನಿರ್ಮಾಣ ಮಾಡಿದ್ದಾರೆ. ಆದರೆ, ಇತ್ತೀಚೆಗೆ ಸಿನಿಮಾ ನಿರ್ಮಾಣದಲ್ಲಿ ಅವರು ನಿಧಾನತೆ ತೋರಿದ್ದಾರೆ. 'ಅವತಾರ ಪುರುಷ 2' ಬಳಿಕ ಅವರ ನಿರ್ಮಾಣದ ಯಾವುದೇ ಹೊಸ ಸಿನಿಮಾ ರಿಲೀಸ್ ಆಗಿಲ್ಲ. ಹೀಗಿರುವಾಗಲೇ ಅವರು ನಾನಿ ಸಿನಿಮಾ ವಿರುದ್ಧ ಕಿಡಿಕಾರಿದ್ದಾರೆ. 'ಹಕ್ಕು ಪಡೆಯದೆ ನಮ್ಮ ಸಿನಿಮಾನ ರಿಮೇಕ್ ಮಾಡಿದ್ದಾರೆ' ಎಂದು ನಾನಿ ವಿರುದ್ಧ ಪುಷ್ಕರ್ ಅವರು ಕಿಡಿಕಾರಿದ್ದಾರೆ.

'ರಿಮೇಕ್ ಹಕ್ಕು ಪಡೆಯದೆ 'ಹಾಯ್ ನಾನ್ನ' ಸಿನಿಮಾ ಮಾಡಲಾಗಿದೆ. 'ಭೀಮ ಸೇನ ನಳಮಹರಾಜ' ಚಿತ್ರದ ರಿಮೇಕ್ ಇದು. ನಾನಿ ಅವರೇ ಎಷ್ಟು ಕೀಳುಮಟ್ಟದ ಕೆಲಸ ಮಾಡಿದ್ದೀರಿ' ಎಂದು ಪುಷ್ಕರ್ ಅವರು ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಮಾಡಿರೋ ಸ್ಕ್ರೀನ್‌ಶಾಟ್ ವೈರಲ್ ಆಗಿದೆ. ತೆಲುಗು ಚಿತ್ರರಂಗದಲ್ಲಿ ಈ ವಿಚಾರ ಸಾಕಷ್ಟು ಚರ್ಚೆ ಹುಟ್ಟುಹಾಕಿದೆ.

'ಭೀಮ ಸೇನ ನಳಮಹರಾಜ' ಹಾಗೂ 'ಹಾಯ್ ನಾನ್ನ' ಸಿನಿಮಾದ ಕಥೆಯ ಎಳೆಯನ್ನು ನೋಡಿದರೆ ಎರಡೂ ಒಂದೇ ರೀತಿ ಎನಿಸುತ್ತದೆ. 'ಭೀಮ ಸೇನ ನಳಮಹರಾಜ' ಚಿತ್ರದಲ್ಲೂ ಕಥಾ ನಾಯಕನಿಗೆ ಎಲ್ಲವೂ ಮರೆತು ಹೋಗಿರುತ್ತದೆ. ಆದರೆ, ಆರಂಭದಲ್ಲಿ ಕಥಾ ನಾಯಕಿಗೇ ಎಲ್ಲವೂ ಮರೆತಿದೆ ಎಂಬ ರೀತಿಯಲ್ಲಿ ತೋರಿಸಲಾಗುತ್ತದೆ. 'ಹಾಯ್ ನಾನ್ನ' ಚಿತ್ರದಲ್ಲೂ ಇದೇ ರೀತಿಯ ಕಥೆ ಇದೆ. ಎರಡೂ ಚಿತ್ರದ ಮೇಕಿಂದ ಬೇರೆ ಬೇರೆ ಇದ್ದರೂ ಕಥೆಯ ಎಳೆ ಒಂದೇ ರೀತಿ ಇತ್ತು. 'ಹಾಯ್ ನಾನ್ನ' ಸಿನಿಮಾ ರಿಲೀಸ್ ಆದಾಗಾಲೂ ಇದೇ ರೀತಿಯ ಅಭಿಪ್ರಾಯ ಸೋಶಿಯಲ್ ಮೀಡಿಯಾದಲ್ಲಿ ವ್ಯಕ್ತವಾಗಿತ್ತು. ಸದ್ಯದ ಮಟ್ಟಿಗೆ 'ಹಾಯ್ ನಾನ್ನ' ಚಿತ್ರದ ನಿರ್ದೇಶಕ ಶೌರ್ಯೇವ್ ಅವರಾಗಲೀ ಚಿತ್ರದ ಹೀರೋ ನಾನಿ ಆಗಲಿ ಈ ಬಗ್ಗೆ ಪ್ರತಿಕ್ರಿಯೆ ನೀಡಿಲ್ಲ.



2016ರಲ್ಲಿ ಬಂದ 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಚಿತ್ರದ ಮೂಲಕ ಸಿನಿಮಾ ನಿರ್ಮಾಣ ಆರಂಭಿಸಿದವರು ಪುಷ್ಕರ್. ಆ ಬಳಿಕ 'ಕಿರಿಕ್ ಪಾರ್ಟಿ', 'ಹಂಬಲ್ ಪೊಲಿಟೀಷಿಯನ್ ನೋಗ್‌ರಾಜ್', 'ಕಥೆಯೊಂದು ಶುರುವಾಗಿದೆ', 'ಅವನೇ ಶ್ರೀಮನ್ನಾರಾಯಣ' ರೀತಿಯ ಸಿನಿಮಾಗಳನ್ನು ನಿರ್ಮಾಣ ಮಾಡಿದರು. 2020ರಲ್ಲಿ 'ಭೀಮಸೇನ ನಳಮಹರಾಜ' ಚಿತ್ರವನ್ನು ನಿರ್ಮಿಸಿದರು.

# ಪ್ರಿಯ ಹೃದಯಗಳೇ.. ಹುಷಾರ್



ವಿಭಿನ್ನ ಕಥಾ ಹಂದರ ಹೊಂದಿರುವ ಬಹುನಿರೀಕ್ಷಿತ 'ಅನ್‌ಲಾಕ್ ರಾಘವ' ಚಿತ್ರ 2025 ರ ಫೆಬ್ರವರಿ 7 ಕ್ಕೆ ರಾಜ್ಯಾದ್ಯಂತ ಬಿಡುಗಡೆಯಾಗಲಿದೆ. ಚಿತ್ರದ ನಾಯಕನಿಗೆ ಯಾವುದೇ ರೀತಿಯ ಬೀಗಗಳನ್ನು ಕೈ ಗೆ ಸಿಗುವ ವಸ್ತುಗಳನ್ನು ಬಳಸಿ ಸಲೀಸಾಗಿ ಅನ್‌ಲಾಕ್ ಮಾಡುವ ಟ್ಯಾಲೆಂಟ್ ಇರುತ್ತದೆ. ಆದರೆ, ಲೈಫ್ ಎಂಬ ಜರ್ನಿಯಲ್ಲಿ ಅವನು ಲಾಕ್ ಆದಾಗ, ಹೇಗೆ ಅದನ್ನು ಅನ್‌ಲಾಕ್ ಮಾಡಿಕೊಂಡು ಹೊರಬರುತ್ತಾನೆ ಎನ್ನುವುದೇ ಚಿತ್ರದ ಒನ್ ಲೈನ್ ಸ್ಟೋರಿ.

ಒಂದು ಕ್ಯೂಟ್ ಲವ್ ಸ್ಟೋರಿ, ಮೈ ನವಿರೇಳಿಸುವ ಸಾಹಸ ದೃಷ್ಯಗಳು, ಇಂಪಾದ ಹಾಡುಗಳು, ವಿಶೇಷ ಪಾತ್ರದೊಂದಿಗೆ ಸಾಧು ಕೋಕಿಲ ಅವರ ಹೊಟ್ಟೆ ಹುಣ್ಣಾಗಿಸುವ ಕಾಮಿಡಿ, ಅದ್ಬುತ ಛಾಯಾಗ್ರಹಣ, ಕಲಾವಿದರ ಮನಮೋಹಕ ಅಭಿನಯ ಹಾಗೂ ಅತ್ಯದ್ಭುತ ನಿರ್ದೇಶನದಿಂದ ಕೂಡಿದ ಒಂದು ಕಂಪ್ಲೀಟ್ ಮನರಂಜನಾ ಪ್ಯಾಕೇಜ್ 'ಅನ್‌ಲಾಕ್ ರಾಘವ'.

ತಮ್ಮ ಮೊದಲ ಸಿನಿಮಾ 'ವೀಕೆಂಡ್' ನಲ್ಲೇ ಹಿರಿಯ ನಟ ಅನಂತ್ ನಾಗ್ ಅವರೊಂದಿಗೆ ಪರದೆ ಹಂಚಿಕೊಂಡು ಅದ್ಭುತ ಅಭಿನಯದಿಂದ ನಿಸಿ ಪ್ರೇಕ್ಷಕರ ಮನ ಗೆದ್ದಿರುವ ಚಂದನವನದ ಭರವಸೆಯ ನಾಯಕ ಮಿಲಿಂದ್ ಗೌತಮ್, ಅನ್‌ಲಾಕ್ ರಾಘವ ಚಿತ್ರದಲ್ಲಿ ನಾಯಕನಾಗಿ ಗ್ರ್ಯಾಂಡ್ ಎಂಟ್ರಿ ಕೊಟ್ಟಿದ್ದಾರೆ. ಈ ಚಿತ್ರಕ್ಕಾಗಿ ಪೂರ್ಣ ಪ್ರಮಾಣದಲ್ಲಿ ತಮ್ಮನ್ನು ಹುರಿಗೊಳಿಸಿಕೊಳ್ಳಲು ನೃತ್ಯ, ಸಾಹಸ, ನಟನೆಯ ಕುರಿತು ಪರಿಣಿತರಿಂದ ಒಂದು ವರ್ಷ ತರಬೇತಿ ಪಡೆದಿದ್ದಾರೆ. ಲವ್ ಮಾಕ್ಟೇಲ್ 2 ಬೆಡಗಿ ರೇಚಲ್ ಡೇವಿಡ್, ಮಿಲಿಂದ್‌ಗೆ ಜೋಡಿಯಾಗಿ ಅಭಿನಯಿಸಿದ್ದು, ಇವರಿಬ್ಬರ ಕೆಮೆಸ್ಟ್ರಿ ತೆರೆ ಮೇಲೆ ಮೋಡಿಮಾಡಲಿದೆ.

ರಾಮಾ ರಾಮಾ ರೇ ಆಂಡ್ ಮ್ಯಾನ್ ಆಫ್ ದಿ ಮ್ಯಾಚ್ ಖ್ಯಾತಿಯ ಡಿ.ಸತ್ಯಪ್ರಕಾಶ್ ಅನ್‌ಲಾಕ್ ರಾಘವನಿಗೆ ಕಥೆ, ಚಿತ್ರಕಥೆ ಹೆಣೆದಿದ್ದಾರೆ. ರಿಯಲ್ ಸ್ಟಾರ್ ಉಪೇಂದ್ರ ಅವರ ಗರಡಿಯಲ್ಲಿ ಕೆಲಸ ಮಾಡಿರುವ, ರಾಜು ಜೇಮ್ಸ್ ಬಾಂಡ್ ಚಿತ್ರದ ನಿರ್ದೇಶಕ ದೀಪಕ್ ಮಧುವನಹಳ್ಳಿ ಅನ್‌ಲಾಕ್ ರಾಘವಗೆ ಆಕ್ಷನ್ ಕಟ್ ಹೇಳಿದ್ದಾರೆ. ಛಾಯಾಗ್ರಾಹಕ ಲವಿತ್, ಪ್ರತಿಯೊಂದು ದೃಶ್ಯಗಳನ್ನೂ ಮನೋಜ್ಞವಾಗಿ ಸೆರೆ ಹಿಡಿದಿದ್ದಾರೆ. ಚಿತ್ರದಲ್ಲಿ ನನ್ ಹುಡುಗಿ, ಲಾಕ್ ಲಾಕ್ ಲಾಕ್, ರಾಘವ ರಾಘವ ಎಂಬ ಮೂರು ಬ್ಯೂಟಿಫುಲ್ ಹಾಡುಗಳಿದ್ದು, ವರಾಹ ರೂಪಂ ಖ್ಯಾತಿಯ ಸಾಯಿ ವಿಘ್ನೇಶ್, ಸಂಗೀತ ಲೋಕದ ಪುರುಷ ಸರಸ್ವತಿ ಎಂದೇ ಖ್ಯಾತರಾಗಿರುವ ವಿಜಯ್ ಪ್ರಕಾಶ್ ಹಾಗೂ ಅಂಕಿತಾ ಕುಂಡು ಅವರ ಕಂಠಸಿರಿಯಲ್ಲಿ ಮೂಡಿ ಬಂದಿವೆ. ಹೃದಯಶಿವ, ಪ್ರಮೋದ್ ಮರವಂತೆ ಹಾಗೂ ವಾಸುಖಿ ವೈಭವ್ ಹಾಡುಗಳಿಗೆ ಸುಂದರವಾದ ಸಾಲುಗಳ ತೋರಣ ಕಟ್ಟಿದ್ದಾರೆ.

ಮಯೂರ ಮೋಷನ್ ಪಿಕ್ಚರ್ಸ್ ಬ್ಯಾನರ್ ಅಡಿ ಮಂಜುನಾಥ ಡಿ ಹಾಗೂ ಗಿರೀಶ್ ಕುಮಾರ್ ಎನ್ ನಿರ್ಮಿಸಿರುವ ಅನ್‌ಲಾಕ್ ರಾಘವ ಚಿತ್ರಕ್ಕೆ ಜೆ ಅನೂಪ್ ಸೀಳಿನ್ ಸಂಗೀತ ಸಂಯೋಜನೆ ಇದೆ. ಅಜಯ್ ಕುಮಾರ್ ಮತ್ತು ಮಧು ತುಂಬಕೆರೆ ಸಂಕಲನ, ವಿನೋದ್ ಹಾಗೂ ಅರ್ಜುನ್ ಸಾಹಸ ನಿರ್ದೇಶನ, ಮುರುಳಿ ಮತ್ತು ಧನಂಜಯ ಅವರ ನೃತ್ಯ ನಿರ್ದೇಶನವಿದೆ.

ಕೋಟೆನಗರಿ ಚಿತ್ರದುರ್ಗದ ಬೆಟ್ಟ, ಗುಡ್ಡ, ರಸ್ತೆ, ಗಲ್ಲಿಗಳು ಹಾಗೂ ಬೆಂಗಳೂರಿನ ಸುಂದರ ತಾಣಗಳು, ಕಲರ್‌ಫುಲ್ ಸೆಟ್‌ಗಳಲ್ಲಿ ಚಿತ್ರೀಕರಣ ಮಾಡಲಾಗಿದೆ. ಪ್ರಮುಖ ಪಾತ್ರಗಳಲ್ಲಿ ಶೋಭರಾಜ್, ಅವಿನಾಶ್, ರಮೇಶ್ ಭಟ್, ವೀಣಾ ಸುಂದರ್, ಧರ್ಮಣ್ಣ ಕಡೂರು, ಸಾಯಿ ಕುಡ್ಲ, ಭೂಮಿ ಶೆಟ್ಟಿ ಮೊದಲಾದವರು ಅಭಿನಯಿಸಿರುವ ಅನ್‌ಲಾಕ್ ರಾಘವ ಚಿತ್ರ ಆರಂಭದಿಂದ ಕೊನೆವರೆಗೂ ಪ್ರೇಕ್ಷಕರಿಗೆ ಪೈಸಾ ವಸೂಲ್ ಅನುಭವ ನೀಡುವುದಂತೂ ಗ್ಯಾರಂಟಿ.

ಪ್ರಕಾಶಕ– ಸಂಪಾದಕ ಹಾಗೂ ಮಾಲೀಕ ಲಕ್ಷ್ಮೀಪ್ರಸನ್ನ ಆರ್.ಹೆಚ್. ಅವರಿಂದ #1652/6, 20ನೇ ತಿರುವು, 8ನೇ ಮುಖ್ಯರಸ್ತೆ, ಸಿ ಬ್ಲಾಕ್, ಸಹಕಾರ ನಗರ, ಬೆಂಗಳೂರು–560092 ಇಲ್ಲಿ ಪ್ರಕಟಗೊಂಡು, ಮುದ್ರಣ: ಪಿ.ಎನ್.ಪ್ರಿಂಟರ್ಸ್, ನರಸಿಪಾಳ್ಯ, ಅರಿಶಿಣಕುಂಟೆ(ಪೋ.), ನೆಲಮಂಗಲ, ಬೆಂಗಳೂರು–562123 ಇಲ್ಲಿ ಮುದ್ರಿಸಲ್ಪಟ್ಟಿದೆ. RNI.KAR/KAN/2009/31934, ದೂರವಾಣಿ: 9448074878
Edited, Published and Owned by Laxmiprasanna R.H, #1652/6, 20th Cross, 8th Main, C Block, SahakarNagar, Bangalore-560092. Printed by P N Printers, Narasipalya, Arishinakunte(Post), Kasaba(hobali), Nelamangala, Bengaluru-562123
Email-mussanje2010@gmail.com, Phone: 9448074878